
ಹರಿಃ ಓಂ

ಶ್ರೀಮದಾನಂದಾತೀರ್ಥ ಭಗವತ್ಪಾದಾಚಾರ್ಯ ಗುರವೇ ನಮಃ

# ಶ್ರೀ ಮಧ್ವನವಮಿ ಸಂದೇಶ



ಸಂಗ್ರಹ-ನಿರೂಪಣೆ

ಪಂ।। ಪ್ರೊ।। ಬದರೀನಾಥಾಚಾರ್ಯ ಘೂಳೀ ಎಂ.ಎ.

ಮಾಧವ ಮಧ್ವ ಪ್ರಕಾಶನ

ಬೆಂಗಳೂರು

೨೦೧೦

Also visit our website
www.maadhawamadhwaprakashana.weebly.com

Jan. 2010

Typeset (DTP) By
**Sri Raghavendra Enterprises**
Banashankari I Stage,
Bangalore-560 050
Phone 080-22421294

ಹರಿಃ ಓಂ

ಶ್ರೀಮದಾನಂದಾತೀರ್ಥ ಭಗವತ್ಪಾದಾಚಾರ್ಯ ಗುರವೇ ನಮಃ

# ಶ್ರೀ ಮಧ್ವನವಮಿ ಸಂದೇಶ

ಶ್ರೀಮದಾನಂದತೀರ್ಥರನ್ನು (ಶ್ರೀಮನ್ಮಧ್ವಾಚಾರ್ಯರನ್ನು) ಜಗತ್ತು ಕಂಡು ಗುರುತಿಸಿದ ಅನುಪಮ ತತ್ವವಾದ ದಾರ್ಶನಿಕರು. ವಾಯುದೇವರು ಈ ಜಗತ್ತಿಗೆ ಉಸಿರಾದರೆ ಶ್ರೀ ಆಚಾರ್ಯ ಮಧ್ವರು ಜಗತ್ತಿನಲ್ಲಿರುವ ಜ್ಞಾನ ಜೀವರಿಗೆ (ಮಾನವರಿಗೆ) ಉಸಿರು ಕೊಟ್ಟವರು.

ಆಚಾರ್ಯರ ಕೃತಿಗಳೂ ಸಹ ಭಗವದ್ ಜ್ಞಾನವನ್ನು ಪ್ರಕಾಶಮಾನ ಮಾಡಿದುದೂ ಸಹ ಅಪೂರ್ವ ಪೂರ್ಣವಾಗಿರುವುದು. ವೇದವ್ಯಾಸರು ವೇದ ವಿಭಾಗ ಮಾಡಿ ಅವುಗಳ ಅರ್ಥ ನಿರ್ಣಯಾತ್ಮಕ ಬ್ರಹ್ಮಸೂತ್ರಗಳನ್ನೂ, ಹದಿನೆಂಟು ಪುರಾಣಗಳನ್ನೂ ರಚಿಸಿ ಜ್ಞಾನ ದೀಪ ನೀಡಿದಂತೆ, ಅವರ ನಂತರ ಅಂಥದೇ ಸ್ಥಾನ ಪಡೆದು ಜಗನ್ಮಾನ್ಯರಾಗಿ ಬೆಳಗಿದವರೇ ಶ್ರೀಮದಾನಂದತೀರ್ಥರು.

ಈ ಕಾರಣದಿಂದಾಗಿ ಆಚಾರ್ಯ ಶ್ರೀಮಧ್ವರನ್ನು ಅಭಿನವ ವೇದವ್ಯಾಸರೆಂದು ಕರೆದರೆ ತಪ್ಪಾಗಲಾರದು. ಮನುಷ್ಯನಿಗೆ ದೇಹ ಪೋಷಣೆಗೆ ಅನ್ನ ಪಾನಾದಿಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಬುದ್ಧಿ ಪೋಷಣೆಯೂ ಅಗತ್ಯ. ಈ ದಿಶೆಯಲ್ಲಿ ಶ್ರೀಮದಾಚಾರ್ಯರು ಮಾನವನಿಗೆ ಎರಡು ರೀತಿ ಉಪಕಾರ ಮಾಡಿರುತ್ತಾರೆ. ಉಸಿರು ಕೊಡುವುದರಿಂದ ಬದುಕಲು ಸಹಕಾರ ಬದುಕಿದ ಮನುಷ್ಯನಿಗೆ ದೇಹ ಪೋಷಣೆ ಜತೆಗೆ ಬುದ್ಧಿ ವಿಕಾಸವಾಗುವುದು ಅಷ್ಟೇ ಮಹತ್ವ. ಈ ದಿಶೆಯಲ್ಲಿ ಶ್ರೀಮದಾಚಾರ್ಯರು ವೈಷ್ಣವ ಜನಾಂಗಕ್ಕೆ ನೀಡಿದ ಅಮೋಘ ನಿಧಿ.

ಶ್ರೀಮದಾಚಾರ್ಯರ ಸ್ಮರಣೆ ಹರಿನಾಮ ಸ್ಮರಣೆಯ ಕುಲಕೋಟಿ ಉದ್ಧಾರ.

ಶ್ರೀಮನ್ಮಧ್ವನವಮಿ ಎಂದು ವೈಷ್ಣವರೆಲ್ಲಾ ಸಮಾವೇಷಗೊಂಡು ಶ್ರೀಮದಾಚಾರ್ಯ ನಾಮಸಂಕೀರ್ತನೆ, ಸ್ಮರಣೆ, ಭಜನೆ, ಪೂಜಾದಿಗಳಿಂದ, ಭಕ್ತಿ ಶ್ರದ್ಧೆಯಿಂದ ಆಚರಿಸಬೇಕು.

ಹರಿಯೇ ಸರ್ವೋತ್ತಮ, ವಾಯುವೇ ಜೀವೋತ್ತಮವೆಂದು ಗಟ್ಟಿಯಾಗಿ ಹೇಳುವುದರೊಂದಿಗೆ ಆಚಾರ್ಯರ ಬಗ್ಗೆ ವರ್ಷಕ್ಕೊಮ್ಮೆಯಾದರೂ ಅವರ ವಿಶೇಷ ಜೀವನ ರಚಿಸಿದ ಅಪೂರ್ವ ಗ್ರಂಥಗಳ ಸೂಕ್ಷ್ಮ ಪರಿಚಯ ಪಾರಾಯಣಾದಿ ಪೂಜೆಗಳನ್ನು ವೈಭವೋಪೇತವಾಗಿ ಆಚರಿಸಿದರೆ ಶ್ರೀಮದಾಚಾರ್ಯರ ಪ್ರೀತಿ ಅನುಗ್ರಹಕ್ಕೆ ಹೇತುವಾಗುವುದು. ಶ್ರೀಮದಾಚಾರ್ಯರು ಈ ಭೂಮಿಯಲ್ಲಿ ಅವತರಿಸಿ ೮೦ ವರ್ಷ ಕಾಲ ತಾತ್ವಿಕ ಪ್ರಪಂಚದಲ್ಲಿ ಹೊಸ ಬೆಳಕು, ಚೇತನ ಮತ್ತು ಒಂದು ಕ್ರಾಂತಿ ತಂದ ಅತಿಮಾನುಷ ಪ್ರವೃತ್ತಿಯನ್ನು ಕಾಣಬೇಕು.

ಆಧುನಿಕ ಬೆಳವಣಿಗೆ ಕಾಣದೇ ಇದ್ದ ಒಂದು ಹಳ್ಳಿ ಪಾಜಕಾದಲ್ಲಿ ಜನಿಸಿ ಒಬ್ಬ ಪುರುಷ ತನ್ನ ಜೀವನದಲ್ಲಿ ನಂಬಲಾಗದ ಕ್ರಾಂತಿ ಸಂಪೂರ್ಣ ಬದಲಾವಣೆ, ಜೊತೆಗೆ ಆಧ್ಯಾತ್ಮಿಕ ವಿಷಯದಲ್ಲಿ ಸುಧಾರಣೆ ಮಾಡಿದ ಪವಾಡ ಪುರುಷರು.

ಶ್ರೀ ಆಚಾರ್ಯರ ವೈವಿಧ್ಯಮಯ ಸಾಧನೆ ನಿಜಕ್ಕೂ ವೈಶಿಷ್ಟ್ಯತೆ ಭಾಷಾಶಾಸ್ತ್ರ, ವ್ಯಾಕರಣ, ವೇದ ವೇದಾಂತ ಅಧ್ಯಯನ, ವಿಮರ್ಶೆ, ಸಂಶೋಧನೆ, ಬಹುಭಾಷಾ ಪ್ರಾವೀಣ್ಯತೆ, ಉದಾತ್ತ ಚಿಂತನೆ, ಆಕರ್ಷಕ ದೇಹಕಾಂತಿ, ಪರಮತ ವಿಮರ್ಶೆ, ಖಂಡನೆ, ಸ್ವಮತ ಸ್ಥಾಪನೆ, ಪ್ರಚಾರ, ಬಿರುಗಾಳಿಯಂತೆ ಕನ್ಯಾಕುಮಾರಿಯಿಂದ ಬದರೀ ಕ್ಷೇತ್ರದವರೆಗೆ ಪ್ರವಾಸ, ಅನೇಕ ಶಿಷ್ಯ ಸಂಪತ್ತು, ಶ್ರೀಕೃಷ್ಣನ ಆರಾಧನೆ, ದೀನರಕ್ಷಣೆ, ತಾಂತ್ರಿಕ ವಿಜ್ಞಾನ ಹೊಂದಿದ ಅಪೂರ್ವ ವ್ಯಕ್ತಿತ್ವ ಬೇರೆ ಯಾರಲ್ಲಿರುವುದು ವಿರಳ. ಇಷ್ಟೆಲ್ಲಾ ಸಾಧಿಸಿ "In Sri Acharya, all were roled into one" ಎನ್ನಲಾಗಿದೆ.

ಹೀಗೆ ಒಂದು ಪ್ರಸ್ತಾವನೆ ನಂತರ ಶ್ರೀ ಮಧ್ವಾಚಾರ್ಯರ ವಿಷಯವಾಗಿ ಈ ಲೇಖನ ಹೊರಟಿದೆ. ಮುಖ್ಯ ವಿಷಯ ಶ್ರೀ ಆಚಾರ್ಯರ ಆಶ್ರಮನಾಮ. ಪೂರ್ಣಪ್ರಜ್ಞ, ಆನಂದದಾಯಕ, ಶಾಸ್ತ್ರರಚನೆ ಮಾಡಿದ್ದರಿಂದ ಆನಂದತೀರ್ಥರೆಂದು, ಅನುಮಾನಗಳಲ್ಲಿ ಅಪ್ರತಿಮ ಪಾಂಡಿತ್ಯದಿಂದಾಗಿ ಅನುಮಾನತೀರ್ಥರೆಂದು ನಂಬಿದವರಿಗೆ ಜ್ಞಾನ ಸುಖ ನೀಡಿದುದರಿಂದ ಸುಖತೀರ್ಥರೆಂದೂ ಅನೇಕ ನಾಮಗಳಿಂದ ಪ್ರಖ್ಯಾತರಾಗಿರುತ್ತಾರೆ. ಶ್ರೀಮಧ್ವಾಚಾರ್ಯರೆಂದು ಯಾರೂ ಕರೆದಿಲ್ಲ. ಆಚಾರ್ಯರೇ ಹೇಳಿಕೊಂಡಿರುತ್ತಾರೆ. **ಮಧ್ವೋತ್ತೃತೀಯು ದಮುನಾ ಗ್ರಂಥಕೃಶಕೇಶವೇ** ಎಂದು. ಬಳಿಕ್ಥಾಸೂಕ್ತದಲ್ಲಿಯೂ ಮಧ್ವವೆಂಬ ಹೆಸರು ಸೂಚಿತವಿದೆ. ಮಧ್ವವೆಂದರೂ ಒಂದೆ, ಆನಂದತೀರ್ಥರೆಂದರೂ ಒಂದೆ. ಮಧು–ಸುಖ, ಜೇನು–ಸುಖ ಕೊಟ್ಟಂತೆ. ಇವರ ಶಾಸ್ತ್ರಗಳೂ ಮಧುರೂಪ ಆನಂದ ನೀಡುವುದು. ಈ ಲೇಖನದಲ್ಲಿ ಮುಖ್ಯವಾಗಿ ಐದು ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸಿ ಶ್ರೀಮದಾಚಾರ್ಯರ ಸಂದೇಶವೇನೆಂದು ತಿಳಿಸುವ ಪ್ರಯತ್ನ.

**ನ ಮಾಧವಸಮೋದೇವಃ ನಚಮಧ್ವಸಮೋಗುರುಃ**
**ನತದ್ವಾಕ್ಯಸಃಸಮಂಶಾಸ್ತ್ರಂ ನಚತಜ್ಞ ಸಮಃ ಪುಮಾನ್**

ಎನ್ನುವ ಆರ್ಯೋಕ್ತಿಯಂತೆ ಈ ನಾಲ್ಕು ಅಂಶಗಳನ್ನು ಯಥಾಮತಿ ತಿಳಿಸಲಾಗಿದೆ.

೧. ಮಾಧವನಿಗೆ ಸಮದೇವತೆ ಇರುವುದಿಲ್ಲ.

೨. ಮಧ್ವರಿಗೆ ಸಮಾನ ಗುರುಗಳೂ ಸಹ ಅಸಂಭವ.

೩. ಆಚಾರ್ಯ ಗ್ರಂಥಗಳಿಗೆ ಸರಿಸಮಾನ ಉತ್ಕೃಷ್ಟ ಕೃತಿಗಳಿರುವುದಿಲ್ಲ.

೪. ಇಂತಹ ಆನಂದದಾಯಕ ಗ್ರಂಥ ಅವಲೋಕನ ಅನುಷ್ಠಾನ ಮಾಡಿದ ಮಾನವನಿಗೆ ಸಮ ಮತ್ತೊಬ್ಬ ಪುರುಷನಿರುವುದಿಲ್ಲ.



ಮುಖ್ಯವಾಗಿ ಎರಡು ಮಾತು.

೧. ನಾವು ಮಾಧ್ವರು. ಶ್ರೀಮಧ್ವಾಚಾರ್ಯರನ್ನೇ ಪರಮ ಪರಮ ಗುರುಗಳೆಂದು ಮೊದಲು ತಿಳಿಯಬೇಕು.

೨. ಶ್ರೀ ಆಚಾರ್ಯರ ಉಪಾಸ್ಯ ದೇವ ಶ್ರೀಕೃಷ್ಣನೇ ನಮಗೆಲ್ಲಾ ಅನಿಮಿತ್ತ ಬಂಧು ಎಂದೂ.

ವೈಷ್ಣವ ಲಾಂಛನಗಳಾದ

**ಮೆರೆವ ಊರ್ಧ್ವ ಪುಂಡ್ರ ಎರಡಾರು ನಾಮವು**
**ಕೊರಳೊಳು ತುಲಸಿಯವನಮಾಲೆಯು ।**
**ಮೆರೆವ ಶಂಖ ಚಕ್ರ ಭುಜದೊಳುಪ್ಪುತ ನಿಮ್ಮ**
**ಸ್ಮರಿಸುತ್ತ ಹಿಗ್ಗುವ ವೈಷ್ಣವ ಜನುಮವ ॥**

ಶಂಖ, ಚಕ್ರ, ಊರ್ಧ್ವ, ಪುಂಡ್ರ ಪಂಚಮುದ್ರೆಗಳನ್ನು ಧರಿಸಬೇಕು ಎಂದು ಶ್ರೀವ್ಯಾಸರಾಜರು ತಿಳಿಸುತ್ತಾರೆ. ಹೀಗೆ ಮುದ್ರಾಧಾರಣೆ, ಹರಿನಿರ್ಮಾಲ್ಯ ಗಂಧ, ಅಕ್ಷತೆ, ಅಂಗಾರಗಳಿಂದ ಮುಖವು ಶೋಭಿಸಬೇಕು.

ನಾಚಿಕೆ ಬಿಡಬೇಕು. ಹರಿನಾಮಗಳನ್ನು ದಿಟ್ಟಾಗಿ ಕಾಣಿಸುವಂತಿರಬೇಕು. ಇಷ್ಟನ್ನು ತಿಳಿದು ಅನುಷ್ಠಾನಕ್ಕೆ ತರಬೇಕು. ಸಿಖ್ಖರನ್ನು ನೋಡಿ ಶಿಖಾಶಿಖೆ ಧೈರ್ಯದಿಂದ ಕಂಗೊಳಿಸುತ್ತಾರೆ.

ಮೇಲೆ ಹೇಳಿದ ಶ್ಲೋಕಾರ್ಥವನ್ನು ಸಂಕ್ಷೇಪವಾಗಿ ತಿಳಿಸುವ ಪ್ರಯತ್ನ

**ನ ಮಾಧವಸಮೋದೇವಃ ನಚಮಧ್ವಸಮೋಗುರುಃ**
**ನತದ್ವಾಕ್ಯಸಃಸಮಂಶಾಸ್ತ್ರಂ ನಚತಜ್ಞ ಸಮಃ ಪುಮಾನ್**

ಅದು ಹೇಗೆ ಅಂತ ಕೇಳುತ್ತೀರಾ.

ಮಾ ಅಂದರೆ ಮಹಾಲಕ್ಷ್ಮೀ ಅಂತ ಅಮರಕೋಶ ತಿಳಿಸುತ್ತದೆ. **"ಲಕ್ಷ್ಮೀಃ ಪದ್ಮಾಲಯಾ ಪದ್ಮಾ ಕಮಲಾ ಶ್ರೀರ್ಹರಿಪ್ರಿಯಾ । ಇಂದಿರಾ ಲೋಕಮಾತಾ ಮಾ ರಮಾ ಮಂಗಲದೇವತಾ ॥"**

ಆಗ ಮಾ ಎಂದರೆ ಲಕ್ಷ್ಮೀದೇವಿಯ ಹೆಸರು. ಅಂತಹ ಲಕ್ಷ್ಮೀದೇವಿಯ ಒಡೆಯ ಸ್ವಾಮಿನಾಥ ಪತಿ ಎನ್ನುವುದು ಸ್ಪಷ್ಟ.

**ಮಾಯಾಃ ಲಭ್ಯ ಮಾಧವಃ** ಎನ್ನುವುದು ನಿರುಕ್ತಿ. ರಮಾದೇವಿಗೆ ಲಭ್ಯನು ಮಾಧವ ಎಂದಾಯಿತು. ಮಾ–ಧವ ಅಂದರೂ ಪತಿ ಗಂಡ, ಮಾಧವನೆಂಬ ಅರ್ಥ.

**ಯಾವಿದ್ಯಾಚ ಹರೇಃ ಪ್ರೋಕ್ತಾ ಯಸ್ಯಾ ಈಶೋಯತೋ ಭವಾನ್ । ತಸ್ಮಾನ್ಮಾಧವ ನಾಮಾಸಿ ಧವಃ ಸ್ವಾಮೀತಿಶಬ್ಧಿತಃ** – ಹರಿವಂಶ

ಮಹಾಲಕ್ಷ್ಮಿಯೇ ಹೇಳಿಕೊಂಡಿದ್ದಾಳೆ. ತನ್ನ ಪತಿ ಸಮುದ್ರಶಾಯಿ ಎಂದು. **"ಮಮ ಯೋನಿರಪ್ಸಂತಸ್ಸಮುದ್ರೇ"** ಇರಲಿ. ಹರಿಯೇ ಲಕ್ಷ್ಮೀಪತಿ ಎಂದು ತಿಳಿಸಲಾಯಿತು. ಆದರೆ ಆ ಶ್ರೀನಾರಾಯಣನೇ (ಮಾಧವನೇ) ಸಮಾನರಹಿತ ದೇವನೆಂದು ಹೇಗೆ ತಿಳಿಯಬೇಕು ?

ಮಾಧವನಂತೆ ಸಾಕಷ್ಟು ದೇವತೆಗಳಿರುವಾಗ ಹರಿಯೇ ಸರ್ವೋತ್ತಮನೆಂದು **"ನ ಮಾಧವ ಸಮೋ ದೇವಃ"** ಎನ್ನುವುದು ಹೇಗೆ ಸಾಧ್ಯ ? ಅಂತಹ ಶ್ರೀಹರಿಗೇನೇ ನಮಸ್ಕಾರ ಎನ್ನುವುದೂ ಸಹ ಆಕ್ಷೇಪ.

**ಕುತೋನಾರಾಯಣಸ್ಯ ನಮ್ಯತ್ವಯಾ । ತಥಾತ್ವೇ ಕುತೋಽನ್ಯಾಸುದೇವತಾಸು ಸತೀಸುತಸ್ಯೈವನಮನಃ ॥** ಈ ಆಕ್ಷೇಪ ಕ್ಕೆ ಉತ್ತರರೂಪವಾಗಿ (ಶ್ರೀಸುಧಾ) ಹರಿವಾಯುಸ್ತುತಿಯ ನಖಸ್ತುತಿಯ ಎರಡನೇ ಶ್ಲೋಕಾರಂಭದಲ್ಲಿ

**ಲಕ್ಷ್ಮೀಕಾಂತ ಸಮಂತತೋಽಪಿಕಲಯನ್ ನೈವೇಶಿತುಸ್ತೇ ಸಮಂ**
**ಪಶ್ಯಾಮ್ಯುತ್ತಮವಸ್ತು ದೂರತರತೋಽಪಾಸ್ತಂ ರಸೋ ಯೋಽಷ್ಟಮಃ ।**

ಹೇ ಲಕ್ಷ್ಮೀಕಾಂತ, ನಿನಗೆ ಸಮಾನರಾದ ದೇವತೆಗಳೇ ಇಲ್ಲಿಲ್ಲವೆಂದ ಮೇಲೆ ನಿನಗಿಂತ ಉತ್ತಮರು ಇರುತ್ತಾರೆಂದು ಹೇಗೆ ಹೇಳಬಲ್ಲೆ ? ಏಕೆಂದರೆ ಲೋಕದಲ್ಲಿ ಆರು ರಸಗಳು ಪ್ರಸಿದ್ಧಿ. ಏಳನೇ ರಸವಿರುವುದಿಲ್ಲ. ಅಂದ ಮೇಲೆ ಎಂಟನೇ ರಸವಿರುವುದು ಹೇಗೆ ಅಸಂಭವವೋ ಹಾಗೇ ನೀನೇ ಸರ್ವೋತ್ತಮನಾಗಿರುವಾಗ ಬೇರೆ ಯಾರೂ ಆ ಕೀರ್ತಿ ಪಡೆಯಲೂ ಸಾಧ್ಯವಿಲ್ಲವೆನ್ನುವುದರಿಂದ ಮಾಧವನೇ ಸರ್ವೋತ್ತಮ, ಸಮಾನರಹಿತವೆಂದು ತಿಳಿಯಬೇಕು.

**ಪ್ರಶ್ನೆ :** ಮಾಧವನೇ ಸರ್ವೋತ್ತಮದೇವನೆಂದು ಹೇಳಿ ಈ ನಾರಾಯಣನೇ ಸರ್ವೋತ್ತಮನೆಂದು ಹೇಳಿದಾಗ ಅವರಲ್ಲಿ ಯಾರು ಸರ್ವೋತ್ತಮನು ? ಎಂಬುದಕ್ಕೆ ಉತ್ತರಿಸುತ್ತಾ, ಶ್ರೀ ಲಕ್ಷ್ಮೀಕಾಂತನಿಗೆ ಅನೇಕಾನೇಕ ಅನಂತ ಹೆಸರುಗಳಿರುವುದು. ಅಂದಾಗ ಮಾಧವನೆಂದರೂ, ನಾರಾಯಣನೆಂದರೂ ಹರೇ ಕೃಷ್ಣ ಎಲ್ಲಾ ವಾಕ್ಯಗಳು ಆ ಜಗದೀಶನನ್ನೇ ತಿಳಿಸುವುದಾದ್ದರಿಂದ ಮಾಧವ, ನಾರಾಯಣ ಇತ್ಯಾದಿ ಸಹಸ್ರಾರು ನಾಮಗಳು ಅವನನ್ನೇ ತಿಳಿಸುವುದು. ಆಯಿತು. ಮಾಧವನೇ ಸರ್ವೋತ್ತಮದೇವನೆಂದು ತಿಳಿಸಿದಿರಿ. ಆದರೆ, ಮಧ್ವರನ್ನು ತಿಳಿಸುವಾಗ ಅವರಿಗಿಂತಲೂ ಅನ್ಯ ಉತ್ತಮ ಗುರುಗಳು ಇರುವುದಿಲ್ಲೆಂದಿರಿ ಅದು ಹೇಗೆ ?



ಜಗತ್ತಿನಲ್ಲಿ ಗುರುಗಳೆನಿಸಿದವರು ಸಾಕಷ್ಟು ಇದ್ದಾರೆ. ಹಾಗೆ ಜಗದ್ಗುರುಗಳೂ ಅಂತ ಹೇಳಿಕೊಳ್ಳುವವರುಗಳ ಸಂಖ್ಯೆ ಬಹಳಷ್ಟು ಇರುವಾಗ ಮಧ್ವರನ್ನೇ ಸರಿಸಮಾನವಿಲ್ಲದ ಗುರುಗಳೆಂದು ಹೇಳಿದಾಗ ವಿರೋಧ ಬರುವುದಲ್ಲವೇ ?

**ಸಮಾಧಾನ :** ಗುರು ಎಂದರೆ ಯಾರು ಎಂದು ತಿಳಿಯೋಣ. ಗುರು ಎನ್ನುವ ಶಬ್ದಕ್ಕೆ ವಜ್ಜೆ – ಭಾರವೆಂದು ನಿಘಂಟು ತಿಳಿಸುತ್ತದೆ. ಆದರೆ ಆ ಶಬ್ದದಲ್ಲಿ ಎರಡು ಅಕ್ಷರಗಳಿರುವುದು – ಗು – ರು.

ಗು ಶಬ್ದ ಅಂಧಕಾರವೆಂದು. ರು ಶಬ್ದ ನಿವಾರಕವೆಂದೂ **"ಗುಕಾರಶ್ಚಂಧಕಾರಶ್ಚ ರುಕಾರಸ್ತನ್ನಿವಾರಕಃ"** ಅಂದರೆ ಅಂಧಕಾರವನ್ನು ನೀಗಿಸಿ ಬೆಳಕನ್ನು ಕೊಡುವವನು. ಇಲ್ಲಿ ಅಂಧಕಾರವೆಂದರೆ ಅಜ್ಞಾನವೆಂಬ ಕತ್ತಲನ್ನು ಹೋಗಲಾಡಿಸಲೂ ನಿಜ ಜ್ಞಾನ ಪ್ರದಾನ ಮಾಡುವವರನ್ನು ಗುರು ಅಂತ ಹೇಳಲಾಗಿದೆ.

ನಮಗೆ ಜನ್ಮದಿಂದ ಅಜ್ಞಾನವಿದೆ. ಅಜ್ಞಾನ ಎಂದರೆ ನಮಗೆ ಯಾವುದು ಉಚಿತ, ಯಾವುದು ಅನುಚಿತವೆಂಬ ಅರಿವು ಇರುವುದಿಲ್ಲ. ಯುಕ್ತಾಽಯುಕ್ತ ವಿಷಯ ಗೊತ್ತಿರುವುದಿಲ್ಲ. ಜೀವನ ಸಂಸಾರ ಭರಣೆ ಮಾಡುವಾಗ ನಮಗೇನು ಬೇಕು ? ಸಂಪಾದನೆ, ಸಂಪತ್ತುಗಳ ಬಗ್ಗೆ ಸಾಕಷ್ಟು ಮನವರಿಕೆ ಇರುವುದು. ಆದರೆ ಇವು ಈ ಲೋಕಕ್ಕೆ ಸಂಬಂಧಪಟ್ಟದ್ದು ಮಾತ್ರ ಅಲೌಕಿಕ ವಿಷಯ ಜ್ಞಾನವಿರುವುದಿಲ್ಲ. ಅದು ಪರಮಾತ್ಮನ ಕುರಿತಂತೆ ಜ್ಞಾನವಿರುವುದಿಲ್ಲ. ಅಂತಹ ಭಗವಂತನ ವಿಷಯವಾಗಿ ಸನ್ಮಾರ್ಗದಲ್ಲಿ ಚಲಿಸಲೂ ಉಪದೇಶ ಮಾಡಿ ಪರಲೋಕದತ್ತ ವಿಷಯವನ್ನು ಬೋಧಿಸುವವರು ಯಾರೋ ಅವರೇ ಗುರುಗಳು. ನಾವು ಅಜ್ಞಾನವೆಂಬ ಕತ್ತಲಲ್ಲಿ ಇದ್ದೇವೆ. ಆಗ ಜ್ಞಾನವೆಂಬ ಬೆಳಕನ್ನು ತೋರಿಸಿ, ನಿಜ ತತ್ವವನ್ನು ಉಪದೇಶ ಮಾಡುವವರನ್ನು ಗುರುಗಳೆಂದು ಕರೆಯಲಾಗುವುದು.

ತಾಯಿ, ತಂದೆ, ಉಪದೇಶ ಮಾಡುವ ಆಚಾರ್ಯರು ಇವರನ್ನು ಗುರು ಶಬ್ದದಿಂದ ಕರೆಯಲಾಗುವುದು. ಆದರೆ ನಿಜವಾದ ಗುರು ಯಾರೆಂದರೆ

ನಮಗಿರುವ ಅಜ್ಞಾನವೆಂಬ ಅಂಧಕಾರವನ್ನು ಕಳೆಯುವುದಕ್ಕಾಗಿ ಸನ್ಮಾರ್ಗವೆಂಬ ಜ್ಞಾನ ಬೆಳಕನ್ನು ಕೊಟ್ಟು ಪರಮಾತ್ಮನ ಸಂಬಂಧ ವಿಷಯಗಳನ್ನು ಉಪದೇಶ ಮಾಡಿ ಕೈ ಹಿಡಿದು ನಡೆಸಿಕೊಂಡು ಹೋಗುತ್ತಾರೋ ಅವರೇ ನಿಜವಾದ ಗುರುಗಳು. ಅವರೇ ಶ್ರೀಮಧ್ವಾಚಾರ್ಯರು. ನೀವು ಹೇಳಿದಂತೆ ಈಗ ಸಾಕಷ್ಟು ಜಗದ್ಗುರುಗಳಿದ್ದಾರೆ. ನಮ್ಮ ಕರ್ನಾಟಕದಲ್ಲೂ ಇದ್ದಾರೆ. ಅವರೆಲ್ಲರೂ ಜಗದ್ಗುರುಗಳೆಂದು ಹೇಳಿಕೊಳ್ಳುತ್ತಾರೆ.

ಅವರು ಯಾವ ಜಗತ್ತಿಗೆ ಗುರುಗಳು ? ಅಲ್ಲದೆ, ಹಳ್ಳ, ಕೊಳ್ಳ, ಗುಹೆಗಳಲ್ಲಿರುವವರು ಜಗದ್ಗುರುಗಳೆನಿಸಿಕೊಳ್ಳುತ್ತಾರೆ. ಅವರ ಉಪದೇಶ ಯಾವ ಹಿತ ಸಾಧನೆಯಾಗದು.

ಪಾರಮಾರ್ಥಿಕವಾಗಿ ಯಾವ ಬೆಳಕನ್ನೂ ತೋರಿಸಲಾರರು. ನಮಗಿರುವ ಅಜ್ಞಾನವನ್ನು ಇನ್ನಷ್ಟು ಹೆಚ್ಚು ಅಜ್ಞಾನಿಗಳಾಗುವಂತೆ ಉಪದೇಶದಿಂದ ನಮ್ಮನ್ನು ಇನ್ನಷ್ಟು ಅಧೋಗತಿಗೆ ಕೊಂಡೊಯ್ಯುವುದು. ಆದರೆ ಸರಿಯಾಗಿ ವಿಮರ್ಶೆ ವಿಚಾರ ಮಾಡಿದಾಗ ವೃಥಾ ದುರಭಿಮಾನ ಬಿಟ್ಟಾಗ ಗುರುಗಳೆಂದರೆ ಶ್ರೀಮದಾನಂದತೀರ್ಥರೇ – ಮಧ್ವಚಾರ್ಯರೇ ವಿನಃ ಅನ್ಯರಲ್ಲವೆಂಬುದು ಸ್ಥಿರವಾಗುವುದು.

ಶಂಕರಾಚಾರ್ಯರು, ರಾಮಾನುಜಾಚಾರ್ಯರು ಗುರುಗಳಲ್ಲವೇ ? ಎಂಬ ಪ್ರಶ್ನೆಗೆ ನೀವೇ ಅವರ ಸಿದ್ಧಾಂತವೇನೆಂದು ತಿಳಿದಾಗ ನಿಜ ಸಂಗತಿ ಗೊತ್ತಾಗುತ್ತದೆ. ಒಬ್ಬರು ನಾನೇ ಬ್ರಹ್ಮನೆಂದು, ಇನ್ನೊಬ್ಬರು ನಾವು ಬ್ರಹ್ಮನಿಗೆ ಸರಿಸಮಾನ ಆನಂದಪಡೆಯುತ್ತೇವೆ ಎಂದರು. ಇನ್ನು ಕೆಲವರು ವಿಚಿತ್ರವಾಗಿ ಬ್ರಹ್ಮನೇ ಇಲ್ಲ. ಎಲ್ಲಾ ಶೂನ್ಯ – Cipher ಎಂದಿದ್ದಾರೆ.

ಎಲ್ಲವೂ ವೇದಶಾಸ್ತ್ರಗಳಿಗೆ ಅಪಾರ್ಥ ಮಾಡಿ ಕುರುಡ ಇನ್ನೊಬ್ಬ ಕುರುಡನನ್ನು ಕೈಹಿಡಿದು ನಡೆಸಿದಂತೆ ಆಗಿ ಇಬ್ಬರೂ ಅಂಧಃಪತನಕ್ಕೆ ಬೀಳುತ್ತಾರೆ. ಹಾಗಾಗಬಾರದು. ನಾವೆಲ್ಲಾ ಈ ವಿಷಯ ಅರ್ಥಮಾಡಿಕೊಳ್ಳಬೇಕು.

**ಪ್ರಶ್ನೆ :** ಇವರೇ ಆಚಾರ್ಯ ಸಿದ್ಧಾಂತ ತಪ್ಪು ಅಂತ ಶ್ರೀಮಧ್ವರ ಮತವೇ ಸರ್ವಮಾನ್ಯ ಅಂತ ಹೇಗೆ ಹೇಳುತ್ತೀರಿ ? ಇತರೇ ಆಚಾರ್ಯರು ಹೇಳುವುದು ಬೋಧಿಸುವುದು ಅಪಸಿದ್ಧಾಂತ ಏಕೆ ?

**ಉತ್ತರ :** ನಿಮ್ಮ ಪ್ರಶ್ನೆ ಸರಿಯಾಗಿದೆ. ಆದರೆ ನೀವು ಹೀಗೆ ಎಲ್ಲರೂ ಬೋಧಿಸುವುದು ಸರಿ ಅನ್ನುವ ಸಂಶಯವಿದೆ. ಅದೂ ಸರಿ. ಅದೂ ಸರಿ ಅಂತ ಏಕೆನ್ನಬಾರದು ಎನ್ನುವ ಅಭಿಪ್ರಾಯ ನಿಮ್ಮ ಪ್ರಶ್ನೆ ತಿಳಿಸುತ್ತದೆ.

ತಪ್ಪು ಕಲ್ಪನೆ ಏಕೆಂದರೆ ಅವರು ತಿಳಿಸುತ್ತಿರುವುದು ವೇದ, ಉಪನಿಷತ್ತು, ಮಿಮಾಂಸ ಶಾಸ್ತ್ರಕ್ಕೆ ವಿರುದ್ಧಾರ್ಥ ಮಾಡಿ ಸ್ವತಿಳುವಳಿಕೆಯಿಂದ ತಮ್ಮದೇ ಆದ ಮತವನ್ನು ಪ್ರಚಾರ ಮಾಡಿರುತ್ತಾರೆ. ಅಲ್ಲದೇ, ವೇದವ್ಯಾಸರ ಅಭಿಮತಕ್ಕೆ ವಿರುದ್ಧವಾಗಿ ಭಾಷ್ಯಾದಿಗಳನ್ನು ಬರೆದಿರುತ್ತಾರೆ. ವೇದಗಳನ್ನು ಒಪ್ಪಿದರಾದರೂ ತದ್ವಿರುದ್ಧ ವಿಪರೀತಾರ್ಥ ಮಾಡಿ ವೇದಾದಿಗಳು ಇವನ್ನೇ ಬೋಧಿಸುವುದು ಅಂತ ತಮ್ಮ ಪೂರ್ವ ಸಿದ್ಧಾಂತವನ್ನು ಹೇರಿರುತ್ತಾರೆ. ಅದು ಹೇಗೆ ಅಂದರೆ, ನಾವು ವಿಚಾರವಂತರು God has given us a great gift that is thinking - man is the only animal which thinks about yes or no, right or wrong.

ಇಂತಹ ವಿಚಾರ ಮಾಡುವ ಒಂದು ದೊಡ್ಡ ನಿಧಿ ನಮ್ಮನ್ನು ಸೃಷ್ಟಿಸಿದ ಆ ಪರಮಾತ್ಮ



ಎಂತಹ ಕರುಣಾಮೂರ್ತಿ. ಶ್ರೀಹರಿಯೇ ಹೇಳುತ್ತಾನೆ ಶಾಸ್ತ್ರಗಳನ್ನು ನಿಮ್ಮ ಬುದ್ಧಿವಂತಿಕೆಯಿಂದ ವಿಚಾರ ಮಾಡಿ.

ವಿಚಾರ ಅಂತ ವಿಮರ್ಶಿಸಿ. ಇಂತಹ ಸ್ವಾತಂತ್ರ್ಯ ಭಗವಂತ ಕೊಟ್ಟಿರುತ್ತಾನೆ. ಅದನ್ನೇ **''ಅಥಾತೋ ಬ್ರಹ್ಮಜಿಜ್ಞಾಸಾ''** ಎನ್ನುವುದು.

ಶ್ರೀಮದಾಚಾರ್ಯರು ತಮ್ಮ ಸಿದ್ಧಾಂತವನ್ನು ಕಲ್ಪಿಸಿ ಬರೆದಿಲ್ಲ. ಏನು ತಿಳಿಸಿದರೂ ಪ್ರಾಮಾಣಿಕವಾಗಿ ಪ್ರಮಾಣಗಳ ಆಧಾರದ ಮೇಲೆ ಅವೆಲ್ಲವನ್ನೂ ಚೆನ್ನಾಗಿ ಮಥನ ಮಾಡಿ ಅವರ ಹಿಂದಿನ ಆಚಾರ್ಯರ ಸಿದ್ಧಾಂತವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ ಜರಡಿ ಹಿಡಿದು ಅವೆಲ್ಲವೂ ವ್ಯಾಸದೇವರಿಗೆ ಸಮ್ಮತವಲ್ಲದ ಅಪಸಿದ್ಧಾಂತವೆಂದು ಹೇಳಬೇಕಾದರೆ ಎಂತಹ ಧೈರ್ಯವಿರಬೇಕು.

ಹೀಗೆ ಶ್ರೀಮದಾಚಾರ್ಯರ ತತ್ತ್ವ ಭಾಷ್ಯಗಳ ಶ್ರೇಣಿಯಲ್ಲಿ ಕೊನೆಯದಾಗಿ ೨೨ನೆಯ ಭಾಷ್ಯವೆನಿಸಿದೆ.

**ಹೆಚ್ಚಿನ ವಿಷಯ : ಶ್ರೀಮನ್ನ್ಯಾಯಸುಧಾಸಾರದೀಪಿಕಾ**ವೆನ್ನುವ ನನ್ನ ಕೃತಿಯಲ್ಲಿ ಕಾಣಬಹುದು. ಇಷ್ಟು ಶ್ರೀಮದಾಚಾರ್ಯರನ್ನು **''ನಮಧ್ವ ಸಮೋಗುರುಃ''** ಎಂದು ತಿಳಿಸಲಾಗಿದೆ.

ಒಂದು ಮುಖ್ಯ ವಿಷಯ ವೈಷ್ಣವರು ತಿಳಿಯಬೇಕು.

ಆಚಾರ್ಯ ಶ್ರೀಮಧ್ವರ ತತ್ವ ನಮ್ಮೆಲ್ಲರ ಶ್ರೇಯ ಸಾಧನೆಗಾಗಿಯೇ ಬರೆದಿರುತ್ತಾರೆ. ನಮ್ಮಂತಹ ಮಂದಮತಿಗಳೂ ಶ್ರೀಹರಿಯ ಅನುಗ್ರಹಕ್ಕೆ ಪಾತ್ರರಾಗಿ ಅವನು ಪ್ರಸಾದನಾದನೆಂದೇ ತನ್ನ ದಿವ್ಯ ವೈಕುಂಠದಲ್ಲಿ ಒಂದು ಸಣ್ಣ ಕುಟೀರ ಕೊಡುತ್ತಾನೆ. ಹೀಗಾಗಬೇಕಾದರೆ ಶ್ರೀಹರಿಯ ಪ್ರೇಮಪುತ್ರರಾದ ವಾಯುದೇವರ ಅಂಶದಿಂದ ಭುವಿಯಲ್ಲಿ ಜನಿಸಿ ಶ್ರೀಮದಾನಂದತೀರ್ಥ – ಪೂರ್ಣಪ್ರಜ್ಞರೆಂಬ ಹೆಸರಿನಿಂದ ನಮ್ಮೆಲ್ಲರಿಗೂ ಉತ್ತಮ ಲೋಕ ಪ್ರಾಪ್ತವಾಗಲೆಂದು ವಿಶಾಲ ಮನಸ್ಸುಳ್ಳವರಾಗಿ ನಮ್ಮ ಆತ್ಮೋದ್ಧಾರಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಮುಡಿಪಾಗಿ ಇಟ್ಟಿರುವುದನ್ನು ನಾವು ಸ್ಮರಿಸಿ ಬದುಕಬೇಕು.

ಶ್ರೀ ಮಧ್ವರು ನಮ್ಮಂತೆ ಜೀವರು. ಆದರೆ ವ್ಯತ್ಯಾಸವಿಷ್ಟೆ. ನಾವು ಜೀವರು, ಸುಖ ದುಃಖ ಪಡುವವರು. ಆದರೆ ಶ್ರೀ ಆಚಾರ್ಯರನ್ನು ಜೀವೋತ್ತಮರೆಂದು ಅವರಿಗೆ ಸುಖ ದುಃಖ ಲೇಶವೂ ಇಲ್ಲದ ಜ್ಞಾನಿಗಳೆಂದು ಕರೆದದ್ದು ಸರ್ವಸಮ್ಮತವೇ.

ಇಷ್ಟು ಶ್ರೀಮದಾಚಾರ್ಯರ ಸಿದ್ಧಾಂತಸಾರ ತಿಳಿಸಿ ಮುಂದೆ ಶ್ರೀಮನ್ಮಧ್ವಮತದ ಮೂಲ ತತ್ವಗಳೇನೆಂಬುದನ್ನು ತಿಳಿಯೋಣ. ಶ್ರೀಮದಾಚಾರ್ಯರ ವಿಷಯವಾಗಿ ಎಷ್ಟು ಬರೆದರೂ ಕಡಿಮೆಯೆ.

## ಶ್ರೀಮನ್ಮಧ್ವಮತ ಮೂಲತತ್ವಗಳು

ಶ್ರೀ ವ್ಯಾಸರಾಜ ಗುರುರಾಜರು ಕೆಳಗಿನ ಶ್ಲೋಕಗಳಲ್ಲಿ ಮಧ್ವ ತತ್ವವೆಂಬ ಒಂಭತ್ತು ಮಣಿಗಳನ್ನು ಪೋಣಿಸಿ ನಮ್ಮಂತಹ ಅಲ್ಪಮತಿಗಳು ತಿಳಿದು ಅದರಂತೆ ಆಚರಣೆ, ಅನುಸಂಧಾನ ಮಾಡಿ ಉಧೃತರಾಗಲಿ ಎಂದು ತಿಳಿಸುತ್ತಾರೆ.

**ಶ್ರೀಮನ್ಮಧ್ವಮತೇ ಹರಿಃ ಪರತರಃ**
**ಸತ್ಯಂ ಜಗತ್ತತ್ವತೋ**
**ಭೇದೋ ಜೀವಗಣಾ**
**ಹರೇರನುಚರಾಃ**
**ನೀಚೋಚ್ಚ ಭಾವಂಗತಾಃ**
**ಮುಕ್ತಿರ್ನೈಜ ಸುಖಾನುಭೂತಿಃ**
**ಅಮಲಾ ಭಕ್ತಿಶ್ಚ ತತ್ಸಾಧನಂ**
**ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಲಾಮ್ನಾಯೈಕ**
**ವೇದ್ಯೋ ಹರಿಃ**

**ಭಾವಾರ್ಥ :**

(೧) ಶ್ರೀಮದಾನಂದತೀರ್ಥಭಗವತ್ಪಾದರ ಸಿದ್ಧಾಂತ (ದ್ವೈತಸಿದ್ಧಾಂತವೆಂದು ಎಲ್ಲಿಯೂ ಹೇಳಿಲ್ಲ. ಆಚಾರ್ಯ ಸಿದ್ಧಾಂತ ತತ್ವವಾದವೆಂದೇ ತಿಳಿದಿತ್ತು)ದಲ್ಲಿ ಜಗತ್ತು ಸತ್ಯವೇ ಅಂದರೆ ನಮಗೆ ಕಾಣಿಸುವ ಈ ಜಗತ್ತನ್ನು (ಸೃಷ್ಟಿಸಿದ ರಮಾಪತಿ) ಪರಮ ಸತ್ಯವೇ ಆಗಿರುವುದು. ಮಿಥ್ಯಾ ಅಲ್ಲ. ಹಾಗೂ ಬ್ರಹ್ಮನೇ ಜಗತ್ತಾಗಿ ಪರಣಮಿಸಿದವೆನ್ನುವ ವಾದವು ತಿರಸ್ಕೃತವಾಯಿತು.

(೨) ಇಂತಹ ಪರಮಾತ್ಮನು ಸರ್ವೋತ್ತಮನು. ಇಲ್ಲಿ ಪರತರಃ ಎಂದು ಪ್ರಯೋಗವಿದೆ. ವ್ಯಾಕರಣ ರೀತ್ಯ **ಪರ ಪರಮ ಪರತರಃ** ಎಂಬ Superlative degreeಯಲ್ಲಿ ಹೇಳಿದಾಗ ಶ್ರೀಹರಿಗಿಂತ ಅನ್ಯ ಉತ್ತಮರಿರುವುದಿಲ್ಲವೆಂದು ತಿಳಿಸಿದಂತಾಯಿತು.

ಇದರಿಂದ ಶ್ರೀಮನ್ನಾರಾಯಣನು ರಮ ಬ್ರಹ್ಮರುದ್ರಾದಿಗಳಾದ ದೇವತೆಗಳಿಗೂ ಅತ್ಯುತ್ತಮನೆಂಬುದೂ ಸೂಚಿತವಾಯಿತು.

(೩) ಜೀವರುಗಳು ಪರಸ್ಪರ ಭೇದವಿರುವುದಲ್ಲದೆ ಅವರೆಲ್ಲಾ ಶ್ರೀಹರಿಯಿಂದ ಅತ್ಯಂತ ಭಿನ್ನರು.

(೪) ಈ ಜೀವರುಗಳು ಪರಸ್ಪರ ಭಿನ್ನರಾಗಿ ಶ್ರೀಹರಿಯ ದಾಸಾನುದಾಸರು. ಅವನು ನಡೆಸಿದಂತೆ ನಡೆಯುವವರು. ಇದರಿಂದ ಭಗವಂತ ಸರ್ವತಂತ್ರ ಸ್ವತಂತ್ರ, ಜಗನ್ನಿಯಾಮಕ. ಜೀವರು ಅವನ ನಿಯಮ್ಯದಲ್ಲಿರುವ ಅಸ್ವಾತಂತ್ರರೂ ಎಂದು ತಿಳಿಯಬೇಕು.



(೫) ಬ್ರಹ್ಮ ಪ್ರಾಣ ರುದ್ರಾದಿ ದೇವತೆಗಳಿಂದ ಆರಂಭಿಸಿ ಮನುಷ್ಯಪರ್ಯಂತ ಉತ್ತಮ ಅಧಮರೆಂಬ ತಾರತಮ್ಯವಿರುವುದು. ನೀಚೋಚ್ಚ ಭಾವಂಗತಾಃ ಎನ್ನುವುದಾಗಿ ತಿಳಿಸುತ್ತದೆ. ಶ್ಲೋಕದಲ್ಲಿ ತಾರತಮ್ಯವಿದ್ದಂತೆ ಮುಕ್ತಿಯಲ್ಲೂ ತಾರತಮ್ಯವಿರುವಿದು.

(೬) ಮುಕ್ತಿ ಎನ್ನುವುದು ಜೀವರು ತಮ್ಮ ಸ್ವರೂಪಕ್ಕನುಸಾರಿಯಾಗಿ ಸುಖವನ್ನು ಅನುಭವಿಸುತ್ತಾರೆ.

ಇಲ್ಲಿ ಮುಕ್ತಿಯ ವಿಷಯವಾಗಿ ತಿಳಿಸುತ್ತಾ ಸ್ವರೂಪಾನಂದ ಹೊಂದುವುದು. ಇಂತಹ ಆನಂದ ನಿರಂತರ ಶಾಶ್ವತ. ಸ್ವರ್ಗಲೋಕದಲ್ಲಿದ್ದಂತೆ ಇರುವುದಿಲ್ಲ. ಮುಕ್ತಿ ಹೊಂದಿದವರು ಪುನಃ ಈ ಭವಲೋಕಕ್ಕೆ ಮರಳಿಬರುವುದಿಲ್ಲ.

ಮುಕ್ತಿಯ ಲಕ್ಷಣ ಶ್ರೀಮಧ್ವಮತದಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತದೆ.

(೭) ಇಂತಹ ವೈಕುಂಠ ಪಡೆಯಲೂ ವೈಕುಂಠಾದಿಪತಿಯಾದ ವೆಂಕಟೇಶನಲ್ಲಿ ನಿರ್ವ್ಯಾಜ್ಯ ಭಕ್ತಿ ಮಾಡಬೇಕು. ಇದೇ ಮುಕುಂದನ ಪ್ರಸಾದಕ್ಕೆ ಸೋಪಾನ.

ಮುಕುಂದ ತನ್ನ ಸುಖಮಯವಾದ ಲೋಕವನ್ನು ನಾವು ಸೇರಬೇಕಾದರೆ ಅವನು ನಮ್ಮನ್ನು, ನಮ್ಮ ಭಕ್ತಿಯನ್ನು ಪರೀಕ್ಷಿಸಿ ಇವನು ನನ್ನ ಭಕ್ತನೆಂದು ಪರಿಗಣಿಸಿ ಕರೆದುಕೊಳ್ಳುತ್ತಾನೆ.

ಭಗವಂತನ ನಗರವನ್ನು ಸೇರಲು ಅವನಲ್ಲಿ ಮಾಡುವ ಭಕ್ತಿಯೇ ಮಾಧ್ಯಮ. ಜಪ ತಪ ಅಧ್ಯಯನ, ದಾನ, ಧರ್ಮ ಏನೇ ಮಾಡಿದರೂ ಅವನು ಪ್ರೀತಿಗಾಗಿ ಮಾಡಿದಾಗ ಆ ಎಲ್ಲಾ ಭಕ್ತಿಯಲ್ಲಿ ಪರ್ಯವಸಾನವಾಗಬೇಕು. ಭಕ್ತಿಯಿಲ್ಲದೇ ಯಾವ ಕರ್ಮವೂ ವ್ಯರ್ಥವೆಂದು ತಿಳಿಯಬೇಕು.

ಹಾಗಾದರೆ ಭಕ್ತಿ ಎಂದರೆ ಏನು ? ತಿಳಿಯೋಣ. ಭಕ್ತಿ ಅಂದರೆ Devotion, attachment, faithful to God ಎಂದು ನಿಘಂಟು ತಿಳಿಸುತ್ತದೆ. ಅನುರಾಗ, ಪ್ರೀತಿ, ಪ್ರೇಮವೆಂದು ಸಾಧಾರಣ ಅರ್ಥ.

ಪ್ರೀತಿ, ಪ್ರೇಮ ನಾವು ಮಾಡುತ್ತವೆ. ಯಾರಲ್ಲಿ ? ನಾನು, ನನ್ನದು, ಪತಿ ಪತ್ನಿ, ಮಕ್ಕಳು, ಸಂಪತ್ತನ್ನು ಪ್ರೀತಿಸುತ್ತೇವೆ. ಇದು ಸಾಮಾನ್ಯ. ಎಲ್ಲರಲ್ಲಿ ಕಾಣಬಹುದು.

ಈ ರೀತಿ ಭಗವಂತನಲ್ಲಿ ಪ್ರೀತಿ ಮಾಡುತ್ತೇವೆ ಅಂದರೆ ನಾವೂ ಶ್ರೀಹರಿಯುನ್ನು ಸಮಾನವಾಗಿ ಪ್ರೀತಿಸುತ್ತೇವೆ ಅನ್ನಬಾರದು. ನಾನು, ನನ್ನದು ಅನ್ನುವ ಪ್ರೇಮಕ್ಕಿಂತ ಅನೇಕಾನೇಕ ಸಹಸ್ರ ಸಾವಿರಗಟ್ಟಲೆ ಹೆಚ್ಚು ಪರಮಾತ್ಮನಲ್ಲಿ ಪ್ರೀತಿ ಮಾಡಬೇಕು. ಆಗ ಭಗವಂತ ನಮ್ಮೆಲ್ಲರಿಗಿಂತ ದೊಡ್ಡವ, ಶ್ರೇಷ್ಠ, ಉತ್ತಮನೆಂದು ತಿಳಿದು ಅವನನ್ನೇ

ಪ್ರೀತಿಪೂರ್ವಕ ಧ್ಯಾನ, ಪೂಜಾ ಮಾಡಿದಾಗ ಭಕ್ತಿ ಎನಿಸುವುದು. ಭಗವಂತನಲ್ಲಿ ಭಕ್ತಿ ಮಾಡಲೂ ಮೊದಲು ಆ ಹರಿಯ ವಿಷಯವಾಗಿ ತಿಳಿದು ಪ್ರೀತಿಸುವುದೇ ಭಕ್ತಿ.

ಮೂಢ ಭಕ್ತಿ, ಅಂಧ ಭಕ್ತಿ ಎನ್ನುವುದಕ್ಕೆ ಅರ್ಥವೇ ಇರುವುದಿಲ್ಲ. ಭಕ್ತಿ ಎಂಬ ಶಬ್ದವೇ ತಿಳಿಸುತ್ತದೆ. ಇದನ್ನೇ ಶ್ರೀಮದಾಚಾರ್ಯರು ಭಕ್ತಿಯ ಲಕ್ಷಣವನ್ನು Definition ತಿಳಿಸುತ್ತಾರೆ.

**"ಭಕ್ತಿರ್ನಾಮ (ಪರಮಾತ್ಮನಿ) ಮಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಧಿಕಃ । ಸ್ನೇಹೋ ಭಕ್ತಿರಿತಿಪ್ರೋಕ್ತಸ್ತ್ವಯಾಮುಕ್ತಿರ್ನಚಾನ್ಯಥಾ"** ಎಂದು ತಿಳಿಸುತ್ತಾರೆ.

ಇದರ ಅರ್ಥ ಭಕ್ತಿ ಎನ್ನುವುದು ಒಂದು ವಿಶೇಷ ಜ್ಞಾನ ಕ್ರಿಯೆ. ಭಗವಂತನ ವಿಷಯ – ಅವನ ಚಿಂತನೆ, ಅರ್ಚನೆ, ವಂದನೆ, ನಮಸ್ಕಾರಗಳಿಂದ ಬಾಳಲು ಶ್ರೀಹರಿ ವಿಷಯಜ್ಞಾನ ಇರಬೇಕು. ಶ್ರೀರಮಾರಮಣ ಈ ಜಗತ್ತಿಗೆ ಸೃಷ್ಟಿಕರ್ತಾ. ರಮಾಬ್ರಹ್ಮಾದಿಗಳಿಂದ ಸೇವ್ಯ. ವೇದಾದಿಗಳ ಅಧ್ಯಯನದಿಂದಲೇ ಅವನ ವಿಷಯಜ್ಞಾನವಾಗಿ ಪರಮಾತ್ಮನೇ ಸ್ವತಂತ್ರ ಸರ್ವಶಕ್ತ, ಸರ್ವೋತ್ತಮ. ನನಗಿಂತ ಅತ್ಯುತ್ತಮನೆಂದು ನನಗೆ ಸಂಬಂಧಪಟ್ಟ ವಸ್ತುಗಳಲ್ಲಿ ಪ್ರೀತಿ ಮಾಡುವುದಕ್ಕಿಂತ ಅತಿ ಹೆಚ್ಚಾಗಿ ಶ್ರೀಹರಿಯನ್ನು ಪ್ರೀತಿಸುವಾಗ ಜನಿಸಿದ ಜ್ಞಾನ, ಭಕ್ತಿ ಎನಿಸಿಕೊಳ್ಳುತ್ತದೆ.

ಹೀಗೆ ಶ್ರೀಶನಲ್ಲಿ ಪ್ರೀತಿ ಮಾಡುವುದನ್ನು ಭಕ್ತಿ ಎನ್ನುವ ಶಬ್ದ ತಿಳಿಸುತ್ತದೆ. ಸ್ವಾಮೀ, ನೀನೇ ಗತಿ. ಅನಾಥ ಬಂಧು ಎಂದು ತಿಳಿದು ಪೂಜಾಜ್ಞಾನ ಮಾಡಬೇಕೆಂದು ತಿಳಿಯಬೇಕು. ಆಗ ಶ್ರೀಹರಿ ಇವನು ನನ್ನ ವಿಷಯಜ್ಞಾನ ಯಥಾಯೋಗ್ಯ ತಿಳಿದು ನನ್ನನ್ನೇ ನಂಬಿದ್ದಾನೆ. ಶರಣು ಹೋಗಿದ್ದಾನೆ. ಇವನೇ ನನ್ನ ನಿಜವಾದ ಭಕ್ತ ಎಂದು ನಮ್ಮನ್ನು ಈ ಭವಸಾಗರದಿಂದ ಬಿಡಿಸಿ ತನ್ನ ಲೋಕದಲ್ಲಿ ಸ್ಥಾನ ಕೊಡುತ್ತಾನೆ. **ಅರ್ಜುನ ಪ್ರತಿಜಾನೀಹಿ ನಮೇ ಭಕ್ತಃ ಪ್ರಣಶ್ಯತಿ** ಅಲ್ಲದೆ **ಅನನ್ಯಾಶ್ಚಿಂತಯಂತೋಮಾಂ ಯೇ ಜನಾಃ ಪರ್ಯುಪಾಸತೇ । ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥** (ಗೀತಾ ೯–೨೨) ಎಂದು ಕೃಷ್ಣ ಪರಮಾತ್ಮನು ತನ್ನ ಭಕ್ತರನ್ನು ಸದಾ ರಕ್ಷಿಸುತ್ತಾನೆ ಎಂಬ ದೃಢ ನಂಬಿಕೆ ಇರಬೇಕು. ಹೀಗೆ ಭಗವಂತನ ಮಹಾತ್ಮ್ಯವನ್ನು ತಿಳಿಯದೇ ಮಾಡುವ ನಮಸ್ಕಾರಾದಿಗಳು ಪರಮಾತ್ಮನ ಪ್ರೀತಿಗೆ ನಾವು ಪಾತ್ರರಾಗುವುದಿಲ್ಲ. ಆದ್ದರಿಂದ ಭಗವಂತನ ಪ್ರಸಾದ ಲಭಿಸಬೇಕಾದರೆ ಅವನ ಬಗ್ಗೆ ಜ್ಞಾನ ಸಹಿತ ಪ್ರೀತಿ ಮಾಡುವುದನ್ನು ಭಕ್ತಿ ಎನ್ನಲಾಗಿದೆ. ನಮಗೆ ಇಂಥಾ ವಿಶ್ವಾಸ ಎಲ್ಲಿದೆ ? "Bhakti is not a subject or material that can be purchased just like in the market" ಶ್ರೀ ಪ್ರಹ್ಲಾದರಾಜರು ಭಕ್ತಿ ವಿಷಯವಾಗಿ ಒಂಭತ್ತು ವಿಧವಾಗಿ ತಿಳಿಸಿರುತ್ತಾರೆ.



**"ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।**
**ಅರ್ಜನಂ ವಂದನಂ ದಾಸ್ಯಂ । ಸಖ್ಯಮಾತ್ಮ ನಿವೇದನಂ ॥**
**ಇತಿ ಪುಂಸಾರ್ಪಿತ ವಿಷ್ಣೌ ಭಕ್ತಿ ಶ್ಚೇಚೇನ್ನವಲಕ್ಷಣಂ ॥**

ಇಂತಹ ಭಕ್ತಿ ಅಮಲಾ ಕಲ್ಮಶವಿಲ್ಲದೆ ಯಾವ ಪ್ರತಿಫಲಾಪೇಕ್ಷೆ ಇಲ್ಲದೇ ಇರುವ ಪ್ರೇಮವು ಶ್ರೀಹರಿಯಲ್ಲಿ ಗಂಗೆಯಂತೆ ಹರಿಯುತ್ತಿರಬೇಕು. ಪ್ರೇಮಪ್ರವಾಹ ತೈಲಧಾರೆಯಂತೆ ಮನಸ್ಸು ಹರಿಯಲ್ಲಿ ಇರಬೇಕು. Do not mortgage your devotion to God for Mundane pleasures. ಎಂದು ತಿಳಿಯಬೇಕು.

ಇಂತಹ ಭಕ್ತಿಯೇ ಮುಕ್ತಿಗೆ ಸೋಪಾನ.

(೮) ಮುಕ್ತಿ ಪಡೆಯಲು ಭಕ್ತಿ ಮಾಡಬೇಕೆಂದು ಹೇಳಿ ಆಯಿತು. ಭಕ್ತಿಯು ಜ್ಞಾನಸಹಿತವಾಗಿರಬೇಕೆಂದು ಸಹ ತಿಳಿಸಲಾಯಿತು. ಆದರೆ ಹರಿ ವಿಷಯ ಜ್ಞಾನ ಹೇಗೆ ಪಡೆಯಬೇಕು ? ಯಾವುದರಿಂದ ಶ್ರೀಶನ ಜ್ಞಾನವಾಗುವುದು ಎಂಬ ಚಿಂತೆ ಬೇಡ. ಏಕೆಂದರೆ ಶಾಸ್ತ್ರಗಳು ಈ ಪ್ರಶ್ನೆಗೆ ಉತ್ತರ ಕೊಡುತ್ತದೆ.

ಶಾಸ್ತ್ರಾಧ್ಯಯನ ಶ್ರವಣಾದಿಗಳಿಂದಲೇ ಶ್ರೀ ಪರಮಾತ್ಮನ ಜ್ಞಾನ ಪ್ರಾಪ್ತವಾಗುವುದು. ಶಾಸ್ತ್ರಗಳು ಯಾವುವು ಎನ್ನುವುದನ್ನು ಆಗಮವೆಂದು ಕರೆಯಲಾಗಿದೆ.

ಭಗವಂತನ ವಿಷಯ ತಿಳಿಯಬೇಕಾದರೆ ಮೂರು ಮಾರ್ಗಗಳಿರುವುದು. (೧) ಪ್ರತ್ಯಕ್ಷ (೨) ಅನುಮಾನ (೩) ಆಗಮ. ಭಗವಂತನ ಜ್ಞಾನ ಪ್ರತ್ಯಕ್ಷದಿಂದ ತಿಳಿಯಲಾಗದು. ಕಾರಣ ಅವನು ಅವ್ಯಕ್ತ. ನಮ್ಮ ಇಂದ್ರಿಯಗಳಿಂದಲೂ ತಿಳಿಯಲು ಸಾಧ್ಯವಿಲ್ಲ. ಏಕೆ ಅವನು ಅಗೋಚರ ? ಅವನ ವಿಷಯಜ್ಞಾನ ಹೇಗಾಗುವುದು ಎಂದರೆ

ಜ್ಞಾನವೆಂಬ ವಿಶೇಷ ಸಾಧನವಾದ ನೇತ್ರಗಳಿಂದಲೇ ಪ್ರತ್ಯಕ್ಷ ಕಾಣಬಹುದು. ತರ್ಕಿಸುತ್ತೇವೆ, ಅನುಮಾನ ಮಾಡಿ ತಿಳಿಯುತ್ತೇವೆ ಎಂದರೆ ಭಗವಂತ ತರ್ಕದಿಂದ ಸಿಗುವವನಲ್ಲ. ಬರೀ ವಾದ ವಿವಾದದಿಂದ ಜ್ಞಾನ ಹೊಂದಲಾಗುವುದಿಲ್ಲ. **ಶುಷ್ಕ ತರ್ಕಂತು ವರ್ಜ ಯೇತ್** ಎಂದು ಶ್ರೀ ಮಧ್ವಾಚಾರ್ಯರು ತಿಳಿಸುತ್ತಾರೆ.

ಆಗ ಉಳಿದಿರುವುದು ಒಂದೇ ಮಾರ್ಗ ಆಗಮಗಳಿಂದ. ಅಂದರೆ ಆಗಮಗಳ ಅಧ್ಯಯನ ಪಠನ, ಪಾರಾಯಣಾದಿಗಳಿಂದ ಶ್ರೀಹರಿ ಜ್ಞಾನವಾಗುವುದು.

ಆಗಮಗಳೆಂದರೆ ವೇದಾದಿ ಸಚ್ಛಾಸ್ತ್ರಗಳು. **"ವೇದಗಳು ನಾಲ್ಕು. ಮೂಲ ರಾಮಾಯಣ–ಮಹಾಭಾರತ ಪಂಚರಾತ್ರಗಮಗಳು"**. ಈ ಏಳನ್ನು ಆಗಮವೆನ್ನಲಾಗಿದೆ. ಇವುಗಳ ಅಧ್ಯಯನದಿಂದ ಹೊರಡುವುದೇ ಜ್ಞಾನ. ಇವನ್ನು ಶಾಸ್ತ್ರವೆಂದೂ ಕರೆಯಲಾಗಿದೆ.

ಸದಾಗಮಗಳು ಪರಮಾತ್ಮನ ವಿಷಯಜ್ಞಾನ ಇವುಗಳನ್ನು ಗುರುಮುಖೇನ ತಿಳಿಯಬೇಕು. **"ಸದಾಗಮೈಕ ವಿಜ್ಞೇಯಂ ಸಮತೀತಕ್ಷರಾಕ್ಷರಂ ನಾರಾಯಣಂ ಸದಾವಂದೇ"** ಎಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ.

ಅಂದಮೇಲೆ ಭಗವಂತ ಪ್ರತ್ಯಕ್ಷದಿಂದ ನೋಡಲಾಗದು. ಇನ್ನು ಅನುಮಾನದಿಂದ ಕೆಲವೊಮ್ಮೆ ತಪ್ಪು ದಾರಿ ತೋರಿಸಲೂಬಹುದು.

ಆದ್ದರಿಂದ ಸದಾಗಮಗಳಿಂದಲೇ ಭಗವಂತನ ಸಾಕ್ಷಾತ್ಕಾರ (ಜ್ಞಾನ)ವಾಗುವುದು.

ಹೀಗೆ ಮಧ್ವಮತದ ಸಾರ, ಭೂತ, ವಿವರಣೆಯಿಂದ ಶ್ರೀಮಧ್ವಾಚಾರ್ಯರಲ್ಲಿ ವಿಶಿಷ್ಟ ರೀತಿಯ ಭಕ್ತಿ, ಶ್ರದ್ಧೆ ಮಾಡಿದರೆ ಮಧ್ವವಲ್ಲಭ ಶ್ರೀಕೃಷ್ಣನ ಜ್ಞಾನ ಹೊಂದಬಹುದು.

## ಶ್ರೀಮನ್ಮಧ್ವಾಚಾರ್ಯರ ಜೀವನ ಚಕ್ರ

ವೇದಗಳಿಗೆ ದುಷ್ಟರು ಅಪಾರ್ಥ ಮಾಡಿ ತಪ್ಪುದಾರಿ ಬೋಧಿಸಿದರು ದೈತ್ಯರು. ಕಲಿಯುಗದಲ್ಲಿ ಬ್ರಾಹ್ಮಣರ ವೇಷ ಧರಿಸಿ ವೇದ ಬ್ರಹ್ಮಸೂತ್ರಗಳಿಗೆ ತಾವೂ ಭಾಷ್ಯ ಬರೆದರು. ಅವು ವೇದವ್ಯಾಸರಿಗೆ ಸಮ್ಮತವಾಗಲಿಲ್ಲ. ಸಜ್ಜನರು ನಿಜಾರ್ಥ ತಿಳಿಯದೇ, ಕಂಗಾಲಾದರು. ಇಂತಹ ವಿಷಮ ಪರಿಸ್ಥಿತಿ ಬಂದಾಗ ಶ್ರೀಮನ್ನಾರಾಯಣ ವೇದವ್ಯಾಸರಾಗಿ ಅವತಾರ ಮಾಡಿದರು. ಬ್ರಹ್ಮಸೂತ್ರಗಳಿಗೆ ನಿಜಮಾರ್ಗ ದರ್ಶನ ಮಾಡಲು ವಾಯುದೇವರಿಗೆ ಭುವಿಯಲ್ಲಿ ಅವತರಿಸಿ ಉತ್ತಮ ಭಾಷ್ಯ ರಚಿಸಲು ಆಜ್ಞಾಪಿಸಿದರು. ಹೀಗಾಗಿ ವಾಯುದೇವರೇ ಒಂದಂಶದಿಂದ ಶ್ರೀಮದಾನಂದತೀರ್ಥರಾಗಿ ಅವತಾರ ಮಾಡಿದರು. ಉಡುಪಿಯ ಸಮೀಪ ಪಾಜಕಾ ಕ್ಷೇತ್ರದಲ್ಲಿ ಮಧ್ಯಗೇಹ ಭಟ್ಟ ದಂಪತಿಗಳನ್ನು ನಿಮಿತ್ತ ಮಾಡಿ ವಾಸುದೇವನೆಂಬ ಹೆಸರಿನಿಂದ ಜನಿಸಿದರು. ಅವರ ಜನ್ಮ ಸಾಮಾನ್ಯರಂತೆ ಕಿಶೋರ ಲೀಲೆಗಳನ್ನು ತೋರಿಸಿದರು.

ಜನನ ವಿಳಂಬಿ ಸಂವತ್ಸರ ಆಶ್ವಯುಜ ಮಾಸ ಶುದ್ಧ ದಶಮಿ. ಇದನ್ನೇ ಮಧ್ವಜಯಂತಿ ಎನ್ನಲಾಗಿದೆ.

ವಾಸುದೇವನಿಗೆ ಉಪನಯನ ಪರಾಭವ ಸಂವತ್ಸರ (ಎಂಟನೇ ವಯಸ್ಸು)ದಲ್ಲಿ ಆಯಿತು.

ವಾಸುದೇವನು ಸನ್ಯಾಸಿಯಾಗಿದ್ದು ಸೌಮ್ಯನಾಮ ಸಂವತ್ಸರ. ಆಗ್ಗೆ ಹತ್ತು ವರ್ಷ.

ಶ್ರೀ ಪರಮಹಂಸ ನಾಮಕ ಪರಮಾತ್ಮನ ಪರಂಪರೆಯಲ್ಲಿ ಬಂದ ಶ್ರೀ ಅಚ್ಯುತ ಪ್ರೇಕ್ಷರಲ್ಲಿ ದೀಕ್ಷ.



ಶ್ರೀಪೂರ್ಣಪ್ರಜ್ಞ ಎಂದು ಆಶ್ರಮ ಹೆಸರು. ಶ್ರೀ ಆಚಾರ್ಯರು ಆಶ್ರಮ ಸ್ವೀಕಾರ ೪ನೇ ದಿನ ಒಬ್ಬ ವೈಶೇಷಿಕ ಪಂಡಿತ ವಾಸುದೇವನೆಂಬುವವನನ್ನು ವಾದದಲ್ಲಿ ಪರಾಜಯಗೊಳಿಸಿದ್ದರು. ಇದೇ ಆಚಾರ್ಯರ ಸಿದ್ಧಾಂತಕ್ಕೆ ಮುಂದೆ ಸ್ಥಾಪಿಸಲು ಬೀಜಯಾಂಕುರವಾಯಿತು.

ಶ್ರೀಮದಾಚಾರ್ಯರು ಉಡುಪಿಯಲ್ಲಿ ಶ್ರೀಕೃಷ್ಣ ಸ್ಥಾಪನೆ ಮಾಡಿದರು. ಆಗ ಶ್ರೀಮದಾಚಾರ್ಯರಿಗೆ ೩೮ ವಯಸ್ಸು.

ಮುಂದೆ ವಿಮುಕ್ತಾತ್ಮನೆಂಬ ಯತಿ ಬರೆದ **ಇಷ್ಟಸಿದ್ಧಿ (ಅದ್ವೈತ ಸಿದ್ಧಿ)** ಎಂಬ ಪ್ರಕರಣ ಗ್ರಂಥವನ್ನು ತಮ್ಮ ಗುರುಗಳಾದ ಅಚ್ಯುತ ಪ್ರಾಜ್ಞರು ಪೂರ್ಣಪ್ರಜ್ಞರಿಗೆ ಪಾಠ ಹೇಳಿಕೊಡುವಾಗ ಶ್ರೀಆಚಾರ್ಯರು ಈ ಗ್ರಂಥದಲ್ಲಿ ೩೨ ದೋಷಗಳಿವೆ ಎಂದು ಹೇಳಿದರು. ಶ್ರೀಮದಾಚಾರ್ಯರು ೩೨ ಸಲಕ್ಷಣ ಗುಣಗಳಿರುವವರು. ಇಷ್ಟ ಸಿದ್ಧಿ ಗ್ರಂಥದಲ್ಲಿ ಅಷ್ಟೇ ದುರ್ಲಕ್ಷಣಗಳಿರುವುದಾಗಿ ಹೇಳಿದ್ದು ಸ್ವಭಾವವೇ.

ಇದು ಅದ್ವೈತ ಸಿದ್ಧಾಂತದಲ್ಲಿನ ಒಂದು ಪ್ರಕರಣ ಗ್ರಂಥ.

ಮುಂದೆ ಬದರೀಯಾತ್ರಾ ಹಿರೇಬದರೀಯಲ್ಲಿ ಶ್ರೀ ವೇದವ್ಯಾಸರ ದರ್ಶನ ಗುರುಕಾಣಿಕೆಯಾಗಿ ಶ್ರೀ ಕೃಷ್ಣ ಗೀತಾಕ್ಕೆ ಭಾಷ್ಯ ರಚಿಸಿಕೊಟ್ಟದ್ದು.

ಇದೇ ಶ್ರೀಮದಾಚಾರ್ಯರ ಪ್ರಥಮ ಭಾಷ್ಯ. ಹೀಗೆ ಉಡುಪಿಯಲ್ಲಿ ಶ್ರೀವ್ಯಾಸಾಜ್ಞೆಯಂತೆ ಬ್ರಹ್ಮಸೂತ್ರ ಭಾಷ್ಯ ರಚನೆ. ಎರಡನೇ ಸಲ ಬದರೀಗೆ ಗಮನ. ಇತ್ಯಾದಿಯಾಗಿ ಬಹುಮುಖ ಪ್ರತಿಭೆ ಆಂಧ್ರದಲ್ಲಿನ ಪ್ರಖ್ಯಾತ ಅದ್ವೈತ ಪಂಡಿತನೊಂದಿಗೆ ಹದಿನಾರು ದಿನ ವ್ಯಾಕ್ಯಾರ್ಥ. ಅದ್ವೈತ ಮತ ಖಂಡನೆಯೊಂದಿಗೆ ತತ್ವವಾದ ಪ್ರವಚನ ಮಾಡಿದಾಗ ಶೋಭನಭಟ್ಟರ ಪರಾಜಯ, ಇವರೇ ಶ್ರೀಮಧ್ವರ ಪ್ರೀತಿಯ ಪ್ರಥಮ ಶಿಷ್ಯರು. ಮುಂದೆ ಮಧ್ವಾಚಾರ್ಯರಿಂದ ಸನ್ಯಾಸ ಸ್ವೀಕಾರ ಶ್ರೀ ಪದ್ಮನಾಭತೀರ್ಥರೆಂದೆನಿಸಿಕೊಂಡ ಮೊದಲ ಯತಿಶಿಷ್ಯರು. ಹೀಗೆ ಆಸೇತು ಹಿಮಾಚಲ ಪರ್ಯಂತ ಸಂಚಾರ ಮಧ್ವಮತ ಪ್ರಚಾರ, ಸ್ಥಾಪನೆ, ಸತತವಾಗಿ ನಡೆನಡೆಸಿದರು. ಇವರಿಗೆ ಮಾಧವತೀರ್ಥರು, ನರಹರಿತೀರ್ಥರು, ಅಕ್ಷೋಭ್ಯತೀರ್ಥರು ಶಿಷ್ಯರಾಗಿ ಬೆಳಗಿದರು.

ತ್ರಿವಿಕ್ರಮಾಚಾರ್ಯರು ಆದಿಯಾಗಿ ಅನೇಕ ಗೃಹಸ್ಥ ಶಿಷ್ಯ ಸಂಪತ್ತು ವ್ಯಾಪಕವಾಯಿತು.

ಮಧ್ಯದಲ್ಲಿ ಶ್ರೀ ಆಚಾರ್ಯರು ೩೭ಕ್ಕೂ ಹೆಚ್ಚು ಅಮೂಲ್ಯ ಗ್ರಂಥರಚನೆ.

ಶ್ರೀಮದಾಚಾರ್ಯರು ಆಡಿದ್ದೆಲ್ಲಾ ಗ್ರಂಥ ಸಮಾನ. ಎಲ್ಲವೂ ಸತ್ಯ ಪ್ರಮಾಣಗರ್ಭಿತ.

ಆಚಾರ್ಯರು ಬಹುಭಾಷಾ ಪ್ರವೀಣರು.

ಆಚಾರ್ಯರ ಆಕಾರ – ಸುಂದರ ದೇಹ, ತೇಜೋಮಯ ಕಾಂತಿ, ಅಜಾನುಬಾಹು, ಸದಾ ಹಸನ್ಮುಖಿ. ಭಕ್ತರಲ್ಲಿ ಅನುಕಂಪ – ಆತ್ಮೀಯತೆ. ಇಷ್ಟು ಸುಲಕ್ಷಣ ಶರೀರವುಳ್ಳವರು ವಾಯುದೇವರ ಅವತಾರವೆಂದು ಬೇರೆ ಹೇಳಬೇಕೆ ?

ಹನುಮರಾಗಿ ಶ್ರೀ ರಾಮಸೇವಾ ದುರಂಧರರು.

ಭೀಮರಾಗಿ ಶ್ರೀ ಕೃಷ್ಣನ ಕಾರ್ಯವಾದ ಭೂಭಾರ ಹರಣ ಮಾಡಿ ದುಷ್ಟ ದೈತ್ಯರ ಸಂಹಾರ.

ಈಗ ಶ್ರೀಮಧ್ವರಾಗಿ ಶ್ರೀಮನ್ನಾರಾಯಣನ ಅನಂತ ಗುಣಗಳಿರುವವನು – ಹರಿಯೇ ಸರ್ವೋತ್ತಮನೆಂದು – ಅವನಲ್ಲಿ ಭಕ್ತಿ ತತ್ಫಲವಾಗಿ ಮುಕ್ತಿಮಾರ್ಗ ತೋರಿಸಿ – ದುರ್ಮತಗಳನ್ನು ಕೂಲಂಕುಶವಾಗಿ ಖಂಡಿಸಿ, ದ್ವೈತ ಮತವೆಂಬ ಪತಾಕೆಯನ್ನು ಜಗತ್ತಿನಲ್ಲಿ ಹಾರಿಸಿದ ನಮ್ಮ ಪರಮ ಗುರುಗಳು.

ಶ್ರೀಮದಾಚಾರ್ಯರು ಅನೇಕ ನಾಮಗಳಿಂದ ಖ್ಯಾತಿ ಪಡೆದಿದ್ದಾರೆ.

ಪೂರ್ಣಪ್ರಜ್ಞ – ಆನಂದತೀರ್ಥ – ಅನುಮಾನತೀರ್ಥ – ಮಧ್ವಾಚಾರ್ಯ – ದ್ವೈತ ವೇದಾಂತ ಸ್ಥಾಪನಾಚಾರ್ಯ – ಸುಖತೀರ್ಥ ಇತ್ಯಾದಿಯಾಗಿ ಕರೆಯಲಾಗಿದೆ.

## ಆಚಾರ್ಯರ ಗ್ರಂಥಗಳ ಅಮೂಲ್ಯರತ್ನಾವಳಿಗಳು

ಶ್ರೀಮದಾಚಾರ್ಯರು ಪ್ರಸ್ಥಾನತ್ರಯಗಳಿಗೆ ತಮ್ಮ ವಿಶಿಷ್ಟ ಭಾಷ್ಯ ವ್ಯಾಖ್ಯಾನ ರಚಿಸಿದ್ದಾರೆ.

ಸೂತ್ರಪ್ರಸ್ಥಾನ ಶ್ರೀ ವೇದವ್ಯಾಸರಿಂದ ರಚಿತ ವೇದಾರ್ಥ ನಿರ್ಣಾಯಕ ಗ್ರಂಥ ಬ್ರಹ್ಮಸೂತ್ರಗಳಿಗೆ ನಾಲ್ಕು ರೀತಿಯ ವ್ಯಾಖ್ಯಾನ

(೧) **ಬ್ರಹ್ಮಸೂತ್ರಭಾಷ್ಯ** – ಇದನ್ನೇ ಶ್ರೀಮಧ್ವಭಾಷ್ಯ ಎನ್ನಲಾಗಿದೆ. ಅತ್ಯಂತ ಪವಿತ್ರ ಗ್ರಂಥ – ಮಂಗಳದಾಯಕ.

(೨) **ಅಣುಭಾಷ್ಯ** – ೩೨ ಛಂದೋಬದ್ಧ ಶ್ಲೋಕಗಳು. ಭಾಷ್ಯದ ವಾಮನ ರೂಪ.

(೩) **ಅನುವ್ಯಾಖ್ಯಾನ** – ಅನ್ಯ ದುಷ್ಟ ಮತಗಳಲ್ಲಿರುವ ವಿಷಯವನ್ನು ವಿಮರ್ಶಿಸಿ ಅವು ದುಷ್ಟಮತ ಹೇಗೆಂದು ತಿಳಿಸಿ ಸನ್ಮಾರ್ಗ ಪ್ರದರ್ಶನ ಮಾಡಲೂ ನ್ಯಾಯ ಉತ್ಕೃಷ್ಟ ಗ್ರಂಥ.

(೪) **ನ್ಯಾಯವಿವರಣೆ** – ಭಾಷ್ಯದಲ್ಲಿ ತಿಳಿಸಿದ ನ್ಯಾಯೋಪೇತ ಯುಕ್ತಿಗಳ ವಿವರಣ.

**ಗೀತಾಪ್ರಸ್ಥಾನ** – ಭಗವದ್ಗೀತೆಗೆ ಶ್ರೀಮದಾಚಾರ್ಯರು ಎರಡು ರೀತಿಯ ವ್ಯಾಖ್ಯಾ ಬರೆದಿರುವುದು ಅವರ ವೈಶಿಷ್ಟ್ಯತೆ.



**ಗೀತಾಭಾಷ್ಯ** – ಕೆಲ ಸಂದೇಹ. ಪರರ ಅಪಾರ್ಥ ಟೀಕಿಸಿ ನಿಜಾರ್ಥ ಬರೆದ ಕೃತಿ.

**ಗೀತಾತಾತ್ಪರ್ಯ** – ಶ್ರೀಕೃಷ್ಣನು ಗೀತೆಯಲ್ಲಿ ಏನನ್ನು ತಿಳಿಸಿರುತ್ತಾನೆ ಎನ್ನುವುದು ಗೀತೆಯ ತಾತ್ಪರ್ಯ.

**ಉಪನಿಷತ್‌ಭಾಷ್ಯ** – ಶ್ರೀಮದಾಚಾರ್ಯರು ಉಪನಿಷತ್ತುಗಳಲ್ಲಿ ಅನೇಕವಿದ್ದರೂ ಮುಖ್ಯವಾಗಿ ೧೦ ಉಪನಿಷತ್ತುಗಳಿಗೆ ಭಾಷ್ಯ ಬರೆದಿದ್ದಾರೆ. (ಈಶ, ಕೇನ, ಕಠ, ತಲವಕಾರ, ತೈತ್ತರೀಯ, ಷಟ್‌ಪ್ರಶ್ನ, ಮಾಂಡೂಕಂ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ) ಇದನ್ನೇ ದಶೋಪನಿಷತ್ತು ಎನ್ನಲಾಗಿದೆ.

**ಋಗ್ಭಾಷ್ಯ** – ಶ್ರೀಮದಾಚಾರ್ಯರನ್ನು ವೇದದ ಬಗ್ಗೆ ತಿಳಿದಿಲ್ಲ ಎನ್ನುವ ಆಕ್ಷೇಪಕ್ಕೆ ಉತ್ತರವಾಗಿ ಋಗ್ವೇದಕ್ಕೆ ಭಾಷ್ಯ ಬರೆದಿರುತ್ತಾರೆ.

**ಪ್ರಕರಣ ಗ್ರಂಥಗಳು** – ತತ್ವಸಂಖ್ಯಾನ, ತತ್ವವಿವೇಕ, ತತ್ವೋದ್ಯೋತ, ಕಥಾಲಕ್ಷಣ, ಪ್ರಮಾಣಲಕ್ಷಣ.

**ಖಂಡನ ತ್ರಯಗಳು** – ಉಪಾದಿಖಂಡನ, ಮಾಯಾವಾದಖಂಡನ, ಪ್ರಪಂಚಮಿಥ್ಯಾತ್ವಾನುಮಾನಖಂಡನ

**ನಿರ್ಣಯ ಗ್ರಂಥಗಳು** – ವಿಷ್ಣುತತ್ವನಿರ್ಣಯ, ಕರ್ಮನಿರ್ಣಯ, ಮಹಾಭಾರತತಾತ್ಪರ್ಯನಿರ್ಣಯ

**ಪುರಾಣ ಪ್ರಕರಣ** – ಯಮಕಭಾರತ, ಶ್ರೀಮದ್ಭಾಗವತತಾತ್ಪರ್ಯ

**ನಿತ್ಯಾಚಾರ ಗ್ರಂಥಗಳು** – ಸದಾಚಾರಸ್ಮೃತಿ, ಕೃಷ್ಣಾಮೃತ ಮಹಾರ್ಣವ, ತಾಂತ್ರಿಕ ವಿಜ್ಞಾನ (Technology) ತಂತ್ರಸಾರಸಂಗ್ರಹ, ಸನ್ಯಾಸಿಗಳಿಗೆ ಮಾರ್ಗದರ್ಶಿ ಯತಿಪ್ರಣವಕಲ್ಪ.

**ಜಯಂತೀನಿರ್ಣಯ** – ಶ್ರೀಕೃಷ್ಣಜಯಂತೀ ಆಚರಣೆಯ ಬಗ್ಗೆ ಬೆಳಕು ಚೆಲ್ಲುವ ಗ್ರಂಥ.

**ಸ್ತೋತ್ರಗಳು** – ಶ್ರೀನೃಸಿಂಹನಖಸ್ತುತಿ
ದ್ವಾದಶಸ್ತೋತ್ರ
ಕಂದುಕಸ್ತುತಿ – ಶ್ರೀಕೃಷ್ಣನ ಸ್ತುತಿ. ಈ ಸ್ತೋತ್ರವನ್ನು ಆಚಾರ್ಯರು ತಾವು ವಾಸುದೇವನೆಂದು ಶಿಶುವಾಗಿದ್ದಾಗ ಮಾಡಿದ ರಚನೆ. ಶ್ರೀಕೃಷ್ಣ ಚೆಂಡಾಟವಾಡುವುದನ್ನು ಸುಂದರವಾಗಿ ಎರಡೇ ಶ್ಲೋಕಗಳಿಂದ ಛಂದೋಬದ್ಧವಾಗಿ ಬರೆದ ಪ್ರಥಮ ಕಾವ್ಯರೂಪ ಸ್ತೋತ್ರ.

ಹೀಗೆ ಇನ್ನು ಹಲವಾರು ಗ್ರಂಥಗಳನ್ನು ಬರೆದಿರಬೇಕು.

**ಬಹುಗ್ರಂಥಕೃತ್ – ಶತಗ್ರಂಥಕರ್ತಾ** ಎಂಬುದಾಗಿಯೂ ತಿಳಿಸಲಾಗಿದೆ.

ಶ್ರೀಮದಾಚಾರ್ಯರು ಜಗನ್ಮಾನ್ಯ ಉತ್ತಮ ಕವಿಗಳು. ಭಾರವಿ, ಕಾಳಿದಾಸ, ಭರ್ತೃಹರಿ, ದಂಡೀಯಾದಿ ಎಲ್ಲರೂ ನಾಚುವಂತೆ ಕವಿತಾಶಕ್ತಿ ಸ್ವರೂಪದಿಂದಲೇ ಲಭಿಸಿತ್ತೆನ್ನುವುದುಂಟು.

ಅಣುಭಾಷ್ಯ, ಅನುವ್ಯಾಖ್ಯಾನ, ಯಮಕಭಾರತಗಳನ್ನು ನೋಡಿದರೆ ಮನವರಿಕೆಯಾಗುವುದು.

ತತ್ರಾಪಿ ಯಮಕಭಾರತ (ಶ್ರೀಕೃಷ್ಣನ ಮಹಿಮಾ ವರ್ಣನೆ)ದಲ್ಲಿ ಒಂದು ಶ್ಲೋಕ ಒಂದೇ ಅಕ್ಷರದಿಂದ ಭಾ ಭಾ ಭಾ ಭಾ ಎಂದು ಇದು ಏಕಾಕ್ಷರ ಶ್ಲೋಕ. ಈ ಶ್ಲೋಕದಲ್ಲಿ ಯಮಕವೆಂಬ ಛಂದಸ್ಸಿನ ಪ್ರಯೋಗವಿದೆ. ಆದಿ ಮಧ್ಯ (ಪ್ರಥಮ ದ್ವಿತೀಯ, ಪ್ರಥಮ ತೃತೀಯ, ಪ್ರಥಮ ಚತುರ್ಥ) ಇಂತಹ ಕಾವ್ಯರಚನಾ ಚಮತ್ಕಾರ ಸಂಸ್ಕೃತ ಸಾಹಿತ್ಯದಲ್ಲೇ ಅತಿ ವಿರಳವೆನ್ನುವುದನ್ನು ಗಮನಿಸಬೇಕು. (ವಿವರ ನನ್ನ ಕೃತಿಯಲ್ಲಿ ಕಾಣಬಹುದು.)

## ಉಪಸಂಹಾರ

ಶ್ರೀಮದಾಚಾರ್ಯರ ಜೀವನ – ಕೃತಿಗಳು – ಪರಮತಖಂಡನ ಪೂರ್ವಕ ಸ್ವಮತ ಸ್ಥಾಪನೆ ಮಾಡಿ ಇಡೀ ಜೀವನದಲ್ಲೇ ಓರ್ವ ಪುರುಷ ಏನನ್ನು ಸಾಧಿಸಲು ಶಕ್ಯವೋ ಅವೆಲ್ಲವನ್ನೂ ಸಾಧಿಸಿ ತಮ್ಮ ಅವತಾರಕಾರ್ಯ ಸಂಪೂರ್ಣವಾಗಿ ಮೆರೆಯುವುದನ್ನು ಶ್ರೀಆಚಾರ್ಯರು ಪ್ರತ್ಯಕ್ಷ ಕಂಡು ಶ್ರೀಶೇಚ್ಛೆಯಂತೆ ಹರಿಪ್ರೀತಿಗಾಗಿ ಮಾಡಿ ಶೇಷಾದಿ ಸಮಸ್ತ ದೇವತೆಗಳು ಜಯಜಯ ಎಂದು ಘೋಷಿಸುತ್ತಿರಲು ಆಚಾರ್ಯರು ಈ ಭುವಿಯಿಂದ ಎಲ್ಲರೂ ನೋಡುತ್ತಿರಲು ಅದೃಶ್ಯರಾದರು. ನಳನಾಮ ಸಂವತ್ಸರ ಮಾಘ ಶುದ್ಧ ನವಮಿ ಎಂದು. ಶಿಷ್ಯರಿಗೆ ಐತರೇಯ ಪಾಠ ಹೇಳುತ್ತಿರಲು ಸನಕಾದಿ ವಂದ್ಯರಾಗಿ ಸುವರ್ಣ ಸುಗಂಧ ಪುಷ್ಪಗಳಿಂದ ತುಂಬಿದಾಗ ಕಾಣೆಯಾಗಿ ಅದೃಶ್ಯರಾದರು.

**ಇತಿ ನಿಗದಿತವಂತಸ್ತತ್ರ ವೃಂದಾರಕೇಂದ್ರಾ**
**ಗುರುವಿಜಯಮಹಂ ತಂ ಲಾಳಯಂತೋ ಮಹಾಂತಮ್ ।**
**ವವೃಷುರಖಿಲದೃಶ್ಯಂ ಪುಷ್ಪವಾರಂ ಸುಗಂಧಂ**
**ಹರಿದಯಿತವರಿಷ್ಠೇ ಶ್ರೀಮದಾನಂದತೀರ್ಥೇ ॥** (ಸು.ಮ.ವಿ. ೧೬–೫೮)

ಎಂದು ಶ್ರೀಮನ್ನಾರಾಯಣಪಂಡಿತಾಚಾರ್ಯರು ವರ್ಣಿಸುತ್ತಾರೆ.

Sri Madhwa visited Badri twice where he offers his reverence to Sri Vedavyasa and then as per his order fulfilled his mission so successfully



and in a glorious manner. Sri Madhwa recreated resurrected Vedas and its Sutras so efficiently. He brought about a radical revolution in Indian speculative philosophy. Built an edifice of Dwaita Vedanta on a strong foundation. He won victories over his opponents. Soon he found himself as the head of an unenviable organisation.

ಹೀಗೆ ಎಂಭತ್ತು ವರ್ಷ ಪೂರ್ಣ ವಯಸ್ಸಿನಲ್ಲಿ ಬಿರುಗಾಳಿಯಂತೆ ಆಸೇತು ಹಿಮಾಲಯ ಪರ್ಯಂತ ಸಂಚರಿಸಿ ದ್ವೈತ ವೇದಾಂತವನ್ನು ಪ್ರಚಾರ, ಸ್ಥಾಪನೆ ಮಾಡಿ ವಿದ್ವಾಂಸ ಯತಿಶಿಷ್ಯ ಸಂಪತ್ತನ್ನು ಗಳಿಸಿ ಆಚಾರ್ಯರು ೭೯ ವರ್ಷ ೩ ತಿಂಗಳು ೧೯ನೇ ದಿನದಂದು ಅದೃಷ್ಯರಾಗಿ ಹಿರೇ ಬದರಿಗೆ ತೆರಳಿ ಇಂದಿಗೂ ಶ್ರೀ ವೇದವ್ಯಾಸರಲ್ಲಿ ನಿತ್ಯಪಾಠ ಹೇಳಿಸಿಕೊಳ್ಳುತ್ತಿರುವರು ಎಂದು ತಿಳಿಸಲಾಗಿದೆ. (ನಳ ಸಂವತ್ಸರ ಮಾಘ ಶುದ್ಧ ನವಮಿ ಸುಮಾರು ಫೆಬ್ರವರಿ – ಮಾರ್ಚ್ ತಿಂಗಳಲ್ಲಿ)

ಹೀಗಾಗಿ ಮಾಘ ಶುದ್ಧ ನವಮಿ ಎಂದೇ **ಶ್ರೀಮಧ್ವನವಮಿ** ಶುಭ, ಪರಮಪವಿತ್ರ ದಿನವೆಂದು ಆಚರಿಸಲಾಗಿದೆ. ಇದಕ್ಕೆ ಆಧಾರ ಶ್ರೀಮದಾಚಾರ್ಯರಿಂದ ರಚಿತ ಶ್ರೀಮಹಾಭಾರತತಾತ್ಪರ್ಯನಿರ್ಣಯ ಗ್ರಂಥದಲ್ಲಿ

**"ಚತುಸಹಸ್ರೇ ತ್ರಿಶತೋತ್ತರೇ ಗತೇ ।**
**ಸಂವತ್ಸರಾಣಾಂತು ಕಲೌ ಪೃಥಿವ್ಯಾಮ್ ।**
**ಜಾತಃ ಪುನರ್ವಿಪ್ರತನುಃ ಸ ಭೀಮೋ**
**ದೈತ್ಯೈರ್ನಿಗೂಢಂ ಹರಿತತ್ತ್ವಮಾಹ"**

ಎಂದು ತಾವೇ ಹೇಳಿಕೊಂಡಿದ್ದಾರೆ. ಅಂದರೆ ಕಲಿಯುಗ ಆರಂಭವಾಗಿ ೪೩೦೦ ವರ್ಷಗಳು ಕಳೆದಾಗ ಶಾಲಿವಾಹನಶಕ ೧೧೨೦ ಎಂದಾಗ ಕ್ರಿ.ಶ. ೧೧೯೮ ಆಸುಪಾಸು ೧೨೦೦ ಅಂತ ನಿರ್ಣಿತವಾಗಿದೆ. ಆಗ ಶ್ರೀಮದಾಚಾರ್ಯರ ಕಾಲ ಕ್ರಿ.ಶ. ೧೨೦೦ ರಿಂದ ೧೨೮೦ ಅಂತ ಹೇಳಬಹುದು. (ಮಹಾಭಾರತತಾತ್ಪರ್ಯನಿರ್ಣಯ ೩೨ನೇ ಅಧ್ಯಾಯ ೧೨೦ನೇ ಶ್ಲೋ.)

### ಕೊನೆಯ ಮಾತು

ಶ್ರೀಮದಾಚಾರ್ಯರ ಮುಖ್ಯ ಸಿದ್ಧಾಂತವನ್ನು ಶ್ರೀವ್ಯಾಸರಾಜರ ಸುಳಾದಿಯೊಂದಿಗೆ ತಿಳಿಸಿ ಮುಗಿಸಲಾಗಿದೆ. ನಾವು ಮಾಡುವ ನಾಲ್ಕು ಅಪರಾಧಗಳು

**"ಆದ್ಯಪರಾಧ ಮಿಥ್ಯಾಜ್ಞಾನ**
**ದ್ವಿತೀಯ ಹರಿಯ ವಿಸ್ಮರಣ**
**ತೃತೀಯ ನಿಷಿದ್ಧಾವಿಹಿತಾಚರಣ**
**ಚತುರ್ಥ ಅಯೋಗ್ಯರಲ್ಲುಪದೇಶ**
**ಕರುಣಾಕರ ಈ ಅಪರಾಧಕೆಲ್ಲ ಶ್ರೀಕೃಷ್ಣ**
**ನೀ ದಯದಿಂದ ನೋಡಯ್ಯ"**

ಎಂದು. ಇಂತು ಮಾಡಿದ ಅಪರಾಧಗಳನ್ನು ಕರುಣಾಸಾಗರ ಹೇ ಕೃಷ್ಣ ದಯದಿಂದ ಕಾಪಾಡು ಎಂದು ಸುಂದರವಾಗಿ ತಿಳಿಸಿರುತ್ತಾರೆ. ನಾವೂ ಹಾಗೆ ಪ್ರಾರ್ಥಿಸಬೇಕು.

ಶ್ರೀಮಧ್ವನವಮೀ ಆಚರಣೆಯಿಂದ ಮಧ್ವಾಚಾರ್ಯರಿಗೆ ಸಂತೋಷವಾಗುವುದು ಎಂಬ ತಪ್ಪು ಕಲ್ಪನೆ ಇರಬಾರದು. ಶ್ರೀಮದಾಚಾರ್ಯರು ಸ್ವಯಂ ತೃಪ್ತರು, ಸಂತುಷ್ಟರು, ಆನಂದರೂಪರು. ಆದರೆ ಮಧ್ವನವಮಿ ಆಚರಣೆ ನಮ್ಮ ಆತ್ಮೋದ್ಧಾರಕ್ಕಾಗಿ ಎಂದು ಭಾವಿಸಿದರೆ ಶ್ರೀಮದಾಚಾರ್ಯರ ಹಾಗೂ ಶ್ರೀಹರಿಯ ಪ್ರೀತಿ ಪ್ರೇಮಕ್ಕೆ ಪಾತ್ರರಾಗುತ್ತೇವೆ.

ಆಚಾರ್ಯರ ಅವತಾರ ಸಿದ್ಧಾಂತ ನಮ್ಮೆಲ್ಲರ ಶ್ರೇಯಸ್ಸಿಗಾಗಿಯೇ ಆಗಲಿ ಇದರಿಂದ ಆಚಾರ್ಯರಿಗೆ ಹೊಸದಾಗಿ ಲಭಿಸಬೇಕಾದ ಪ್ರಯೋಜನವಿರುವುದಿಲ್ಲ. ಇದನ್ನೇ ಆಚಾರ್ಯರು **"ನಾಸ್ಮದುಕ್ತಿ ಸದೃಶಂಹಿತರೂಪಂ"** ಎಂದು ನಿಸ್ವಾರ್ಥಿಗಳಾಗಿ ತಿಳಿಸಿರುತ್ತಾರೆ.

ಶ್ರೀಮಧ್ವನವಮಿಯಂದು ವರ್ಷದಲ್ಲಿ ಒಂದು ದಿನ ಮಾತ್ರ ಸ್ಮರಿಸಬೇಕೆಂದು ತಿಳಿಯಬಾರದು. ಶ್ರೀಆಚಾರ್ಯರಿಂದ ರಚಿತ ಕೃತಿಗಳನ್ನು, ಗ್ರಂಥಗಳನ್ನು ನಿತ್ಯನಿರಂತರ ಅಧ್ಯಯನ ಮಾಡಿದಾಗ ಗುರುಗಳು ಪ್ರೀತರಾಗುತ್ತಾರೆ.

ಇಷ್ಟು ಬರೆದು ಶ್ರೀಮಧ್ವನವಮಿ ಸಂದೇಶವೆಂಬ ಕಿರುಕೃತಿಯನ್ನು ಅಸ್ಮದ್ಗುರ್ವಂತರ್ಯಾಮಿ ಶ್ರೀಮದಾಚಾರ್ಯರ ಉಪಾಸ್ಯ ಮೂರ್ತಿ ಶ್ರೀ ಕೃಷ್ಣ ಪರಮಾತ್ಮನ ಚರಣಾರವಿಂದಗಳಲ್ಲಿ ಸಮರ್ಪಿತವಾಗಿದೆ.

ವಿರೋಧಿ ಸಂವತ್ಸರ (ಶಾ.ಶ. ೧೯೩೧)
ಮಾಘ ಶುಕ್ಲ ನವಮಿ
೨೪-೦೧-೨೦೧೦

ಸಂಗ್ರಹ / ನಿರೂಪಣೆ / ಪ್ರಕಟಣೆ
ಹರಿ ಗುರು ಚರಣದಾಸ
**ಬದರೀನಾಥಾಚಾರ್ಯ ಘೂಳೀ**